# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:12-08-2025 ರಂದು ಮಂಗಳವಾರ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 397ನೇ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಕೇಶವ ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಡಾ. ಕೆ.ಎಲ್. ಅರವಿಂದ. ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಮಧು ಜಿ. ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ಉಲ್ಲಾಸ್ ಇ.ಜಿ., ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಶೈಲಜಾ ಸಿದ್ದಪ್ಪ ಹೊಸಳ್ಳೇರ ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 12. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 13. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 14. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 15. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 16. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

1. ಪ್ರೊ. ಜಗನ್ನಾಥ ಕೆ. ಡಾಂಗೆ, ಡೀನರು, ಶಿಕ್ಷಣ ನಿಕಾಯ

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. 2025ರ ಜೂನ್ 30ರಂದು ವಿಶ್ವವಿದ್ಯಾಲಯದ ಸೇವೆಯಿಂದ ವಯೋನಿವೃತ್ತಿ ಹೊಂದಿದ ಸಿಂಡಿಕೇಟ್ ಸದಸ್ಯರಾಗಿದ್ದ ಪ್ರೊ. ಜೆ. ನಾರಾಯಣ, ಹಿರಿಯ ಪ್ರಾಧ್ಯಾಪಕರು ಮತ್ತು ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರ ಸೇವೆಯನ್ನು ಸ್ಮರಿಸಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಮಾನ್ಯ ಕುಲಪತಿಯವರು ವೈಯಕ್ತಿಕ ಕಾರ್ಯನಿಮಿತ್ತ ದಿನಾಂಕ:12-07-2025 ರಿಂದ ದಿನಾಂಕ:27-07-2025 ರವರೆಗೆ ಗಳಿಕೆ ರಜೆಯ ಮೇಲೆ ಕೆನಡಾ ದೇಶಕ್ಕೆ ತೆರಳಿದ್ದ ಸಂದರ್ಭದಲ್ಲಿ ಪ್ರಭಾರ ಕುಲಪತಿಯಾಗಿ ಕಾರ್ಯನಿರ್ವಹಿಸಿದ ಶಿಕ್ಷಣ ನಿಕಾಯದ ಡೀನರಾದ ಪ್ರೊ.ಜಗನ್ನಾಥ ಕೆ. ಡಾಂಗೆರವರನ್ನು ಸಭೆಯು ಅಭಿನಂದಿಸಿತು. ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಯ ದೃಷ್ಟಿಯಿಂದ ತಮ್ಮ ಅಮೂಲ್ಯವಾದ ಸಲಹೆ ಮತ್ತು ಸಹಕಾರ ನೀಡುವುದರ ಮೂಲಕ ಆರೋಗ್ಯಪೂರ್ಣ ಚರ್ಚೆ ಹಾಗೂ ನಿರ್ಣಯಗಳನ್ನು ಕೈಗೊಳ್ಳೋಣ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಶ್ರೀ ಬಿ.ಎಸ್.ಶಶಿಧರ್‌ರವರು ಮಾತನಾಡಿ, ಒಮ್ಮೆ ನಿಗದಿಪಡಿಸಲಾದ ಸಿಂಡಿಕೇಟ್ ಸಭೆಯ ದಿನಾಂಕವನ್ನು ಪದೇ ಪದೇ ಮುಂದೂಡಲಾಗುತ್ತಿದೆ. ಸಿಂಡಿಕೇಟ್ ಸದಸ್ಯರುಗಳು ಕೂಡ ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದು, ನಮಗೂ ವಿವಿಧ ಕಾರ್ಯಕ್ರಮಗಳಿರುತ್ತವೆ. ಆದುದರಿಂದ ಕುಲಪತಿಯವರು, ಕುಲಸಚಿವರು ಮತ್ತು ಮೌಲ್ಯಮಾಪನ ಕುಲಸಚಿವರು ಕುಳಿತು ಒಮ್ಮತದ ದಿನಾಂಕ ನಿಗದಿಪಡಿಸಿ. ಒಮ್ಮೆ ದಿನಾಂಕವನ್ನು ನಿಗದಿಪಡಿಸ್ಸಿದ ನಂತರ ಮತ್ತೆ ಬದಲಾಯಿಸುವುದು ಬೇಡ ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ನಿಯಮಗಳ ಪ್ರಕಾರ 45 ದಿನಗಳಿಗೆ ಒಮ್ಮೆ ಸಿಂಡಿಕೇಟ್ ಸಭೆ ನಡೆಯಬೇಕು. ಆದರೆ ಈ ಹಿಂದೆ ಮೇ 20ಕ್ಕೆ ನಡೆದಿದ್ದು, ಈಗಾಗಲೇ ಸುಮಾರು 73 ದಿನಗಳು ಸಂದಿವೆ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಎರಡು ಸಭೆಗಳ ನಡುವ ಅಂತರ ಜಾಸ್ತಿಯಾದಲ್ಲಿ ಅಜೆಂಡಾದ ವಿಷಯಗಳು ಕೂಡ ಜಾಸ್ತಿಯಾಗುತ್ತವೆ ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ ಅಜೆಂಡಾಗಳು ಹೆಚ್ಚಾದಂತೆ ಸಭೆಯ ಸಮಯ ಕೂಡ ದೀರ್ಘವಾಗುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಕೆಲವು ಅನಿವಾರ್ಯ ಕಾರಣಗಳಿಂದ ಮುಂದೂಡಬೇಕಾಯಿತು. ಮುಂದಿನ ದಿನಗಳಲ್ಲಿ ಹೀಗಾಗದಂತೆ ಕ್ರಮ ವಹಿಸಲಾಗುವುದು ಎಂದರು.

ಶ್ರೀ ಶಿವಕುಮಾರ್‌ರವರು ಮಾತನಾಡಿ, ಹೊರಗುತ್ತಿಗೆ ನೌಕರರು ಆಡಳಿತ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾಗ, ಕುಲಪತಿಯವರು ಅವರೊಂದಿಗೆ ಮತ್ತು ಸಿಂಡಿಕೇಟ್ ಸದಸ್ಯರುಗಳೊಂದಿಗೆ ಸೌಜನ್ಯಯುತವಾಗಿ ವರ್ತಿಸಲಿಲ್ಲ. ಕುಲಪತಿಯವರು ಸಿಂಡಿಕೇಟ್ ಸದಸ್ಯರಿಗೆ ಗೌರವ, ಮನ್ನಣೆ ನೀಡುತ್ತಿಲ್ಲ. ನ್ಯಾಕ್ ಸಂಬಂಧಿತ ಕೆಲಸ ಕಾರ್ಯಗಳಲ್ಲಿ ಹೊರಗುತ್ತಿಗೆ ನೌಕರರು ಕೂಡ ಶ್ರಮಿಸಿದ್ದಾರೆ. ಆದರೆ ನ್ಯಾಕ್ "ಎ" ಗ್ರೇಡ್ ಬಂದ ಕಾರ್ಯಕ್ರಮಕ್ಕೆ ಹೊರಗುತ್ತಿಗೆ ನೌಕರರನ್ನು ಆಹ್ವಾನಿಸದೇ ಹೊರಗಿಟ್ಟು ಅವಮಾನ ಮಾಡಲಾಯಿತು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ನಾನು ಆಗತಾನೆ ಕಾರ್ಯಕ್ರಮದಿಂದ ಬಂದಿದ್ದು, ಕಛೇರಿಗೆ ತೆರಳಿ ಹೊರಗುತ್ತಿಗೆ ನೌಕರರ ಸಮಸ್ಯೆಗಳ ಬಗ್ಗೆ ಕುಲಸಚಿವರು ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿ ನಂತರ ಬಂದು ನೌಕರರೊಂದಿಗೆ ಮಾತನಾಡಬೇಕು ಎಂದಿದ್ದೆ. ಅವರುಗಳ ಸಮಸ್ಯೆಗಳಿಗೆ ನಾನು ಸಕಾರಾತ್ಮಕವಾಗಿ ಸ್ಪಂದಿಸಿದ್ದೇನೆ. ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿತಗೊಳಿಸುವಂತೆ ಸರ್ಕಾರದಿಂದಲೇ ನಿರ್ದೇಶನವಿದೆ. ಆದುದರಿಂದ, ಇದರ ಬಗ್ಗೆ ನೌಕರರಿಗೆ ಮನವರಿಕೆ ಮಾಡಿಕೊಡುತ್ತಾ, ಕೇವಲ ಈ ಹೊರಗುತ್ತಿಗೆ ಉದ್ಯೋಗವನ್ನೇ ನಂಬಿ ಇರಬೇಡಿ. ಬೇರೆ ದಾರಿಗಳನ್ನು ಕೂಡ ನೋಡಿಕೊಳ್ಳಿ ಎಂದು ತಿಳಿಸಿದ್ದೇನೆ ಎಂದರು. ಮುಂದುವರೆದು ಮಾತನಾಡಿದ ಅವರು, ನ್ಯಾಕ್ ಕೆಲಸದಲ್ಲಿ ಎಲ್ಲರೂ ಶ್ರಮಿಸಿದ್ದಾರೆ. ಕೊನೆಯ ಹಂತದಲ್ಲಿ ಸಮರೋಪಾದಿಯಲ್ಲಿ ಕೆಲಸ ನಿರ್ವಹಿಸಿದ್ದರಿಂದ "ಎ" ಶ್ರೇಣಿ ಪಡೆಯಲು ಸಾಧ್ಯವಾಯಿತು ಎಂದರು.

ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ನ್ಯಾಕ್‌ನಿಂದ "ಎ" ಶ್ರೇಣಿ ಬಂದಿದ್ದಕ್ಕಾಗಿ ಸಿಂಡಿಕೇಟ್ ಸದಸ್ಯರಾದ ನಮಗೆಲ್ಲರಿಗೂ ಸಂತೋಷವಾಯಿತು. ಆದರೆ, ನ್ಯಾಕ್ ಪೀರ್ ಸಮಿತಿ ಬಂದಾಗ ಕೆಲವೇ ಸದಸ್ಯರನ್ನು ಮಾತ್ರ ಆಹ್ವಾನಿಸಲಾಗಿದ್ದು, ಎಲ್ಲರನ್ನೂ ಪರಿಗಣಿಸಬಹುದಾಗಿತ್ತು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಸಿಂಡಿಕೇಟ್‌ನಲ್ಲಿದ್ದ ಪ್ರಿನ್ಸಿಪಾಲರನ್ನು ಕರೆಸಿದ ಉದ್ದೇಶ ಅವರಿಗೆ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಮಾಹಿತಿಗಳ ಅರಿವು ಇರುತ್ತದೆ ಎಂಬುದಾಗಿತ್ತು ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ, ನ್ಯಾಕ್ ಸಮಿತಿಯೊಂದಿಗೆ ಪಾಲ್ಗೊಳ್ಳಲು ಕೇವಲ 6 ಜನ ಸಿಂಡಿಕೇಟ್ ಸದಸ್ಯರನ್ನು ಮಾತ್ರ ಆಯ್ಕೆ ಮಾಡಲಾಗಿತ್ತು. ನಾನು ಕೂಡ ಪದವಿ ಕಾಲೇಜಿನಲ್ಲಿ ಅಧ್ಯಾಪಕಳಾಗಿ ಸುಮಾರು ಮೂರು ದಶಕಗಳ ಕಾಲ ಕೆಲಸ ಮಾಡಿದ್ದು, ನ್ಯಾಕ್ ಸಂಬಂಧಿತ ಕೆಲಸ ನಿರ್ವಹಿಸಿದ ಅನುಭವ ಇತ್ತು. ನ್ಯಾಕ್ ಸಮಿತಿ ಬಂದಾಗ ಎಲ್ಲಾ ಸಿಂಡಿಕೇಟ್ ಸದಸ್ಯರನ್ನೂ ಆಹ್ವಾನಿಸಬೇಕಾಗಿತ್ತು. ಸಮಿತಿಯೊಂದಿಗಿನ ಚರ್ಚೆಯಲ್ಲಿ ಮಾತ್ರ ಆಯ್ದ ಸದಸ್ಯರು ಮಾತ್ರ ಮಾತನಾಡಲು ಅವಕಾಶ ನೀಡಬಹುದಾಗಿತ್ತು. ವಕೀಲಿ ವೃತ್ತಿಯಲ್ಲಿರುವ ಸಿಂಡಿಕೇಟ್ ಸದಸ್ಯರಿಗೆ ಕೂಡ ನ್ಯಾಕ್‌ನ ಅನುಭವ ಆಗುತ್ತಿತ್ತು ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ ವಿಶ್ವವಿದ್ಯಾಲಯವು ಕೆಲವೇ ಸಿಂಡಿಕೇಟ್ ಸದಸ್ಯರನ್ನು ಮಾತ್ರ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

Scanned with OKEN Scanner

ವಿವಿಧ ಸಮಿತಿಗಳಿಗೆ ಆಹ್ವಾನಿಸುತ್ತಿದೆ. ಎಲ್ಲರಿಗೂ ಸಮಾನ ಅವಕಾಶ ನೀಡಬೇಕು ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ನಾನು ವಿಶ್ವವಿದ್ಯಾಲಯದ ಯಾವುದೇ ಸಮಿತಿಯ ಸದಸ್ಯನಾಗಿ ನೇಮಿಸಿ ಎಂದು ಕೇಳಿಲ್ಲ. ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಶ್ರಮಿಸುತ್ತೇನೆ. ನನ್ನನ್ನು ಯಾವುದೇ ಸಮಿತಿಗೆ ನೇಮಿಸುವುದು ಬೇಡ. ಎಲ್ಲಾ ಸದಸ್ಯರನ್ನೂ ಕರೆಯಿರಿ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಯಾವ ಸಮಿತಿಗೆ ಯಾರು ಸೂಕ್ತ ಎಂಬುದನ್ನು ಪರಿಗಣಿಸಿ ಎಲ್ಲರನ್ನೂ ನೇಮಿಸಲಾಗುತ್ತದೆ. ಎಲ್ಲಾ ಸದಸ್ಯರಿಗೂ ಸಮಾನ ಅವಕಾಶ ನೀಡಲಾಗುವುದು. ಯಾರೂ ಹಿಂಜರಿಯಬಾರದು. ಎಲ್ಲರೂ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ನಂತರ ಕಾರ್ಯಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆ ಹಾಗೂ ನಿರ್ಣಯಕ್ಕೆ ತೆಗೆದುಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2025–ಸಿಂ–5.01:** ದಿನಾಂಕ:24–03–2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ವಿಷಯ ಸಂಖ್ಯೆ:2025–ಸಿಂ–3.03ರ ನಿರ್ಣಯದಲ್ಲಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸಬೇಕಾಗಿರುವ ಹಿನ್ನೆಲೆಯಲ್ಲಿ, ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ರಾಜ್ಯ ಸರ್ಕಾರದ ಏಕ ರೂಪದ ಪ್ರವೇಶ ಶುಲ್ಕಗಳನ್ನು ಅಳವಡಿಸಿಕೊಳ್ಳುವ ಕುರಿತಾಗಿ ವಿವರವಾದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಮುಂದಿನ ಸಿಂಡಿಕೇಟ್ ಸಭೆಗೆ ಅಥವಾ ಸಾಧ್ಯವಾದರೆ, ಈ ವಿಷಯಕ್ಕಾಗಿಯೇ ವಿಶೇಷ ಸಿಂಡಿಕೇಟ್ ಸಭೆಯನ್ನು ನಡೆಸಿ, ಸಭೆಯ ಅನುಮೋದನೆ ಪಡೆದುಕೊಂಡು, 2025–26ನೇ ಶೈಕ್ಷಣಿಕ ಸಾಲಿನಿಂದಲೇ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲು ನಿರ್ಣಯಿಸಲಾಗಿತ್ತು. ಈ ವಿಷಯದ ಕುರಿತು ಈವರೆಗೂ ವಿಶ್ವವಿದ್ಯಾಲಯ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು.

ಮುಂದುವರೆದು ಮಾತನಾಡಿದ ಅವರು, ದೂರಶಿಕ್ಷಣ ನಿರ್ದೇಶನಾಲಯದ ಎಲ್.ಎಂ.ಎಸ್. ಸಾಫ್ಟ್‌ವೇರ್ ಅನುಷ್ಠಾನದ ಕುರಿತಾಗಿ ಪರಿಶೀಲಿಸಲು ಸಮಿತಿ ರಚಿಸಲಾಗಿದ್ದು, ಅದರಲ್ಲಿ ಈವರೆಗೆ ಯಾವುದೇ ಪ್ರಗತಿಯಾಗಿಲ್ಲ. ಸಿಂಡಿಕೇಟ್ ನಿರ್ಣಯಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿಲ್ಲ. ಇದು ಸರಿಯಲ್ಲ. ಈ ರೀತಿಯಾದಲ್ಲಿ ಸಿಂಡಿಕೇಟ್ ನಿರ್ಣಯಗಳಿಗೆ ಯಾವುದೇ ಬೆಲೆ ಇರುವುದಿಲ್ಲ ಎಂದರು. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ವಹಿಸುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

ಶ್ರೀ ಹೆಚ್.ಜಿ. ಅರವಿಂದರವರು ಮಾತನಾಡಿ, ವಿಷಯ ಸಂಖ್ಯೆ:2025–ಸಿಂ–3.04ರಲ್ಲಿ ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ವಾಹನ ಚಾಲಕರಿಗೆ ಸರ್ಕಾರದ ವಿವಿಧ ಸಚಿವರು, ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಪ್ತ ಶಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ಸಂಚಿತ ವೇತನವನ್ನು ಪರಿಷ್ಕರಿಸಿರುವಂತೆ, ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 4 ಜನ ಹಂಗಾಮಿ ವಾಹನ ಚಾಲಕರಿಗೆ ಕರ್ನಾಟಕ ಸರ್ಕಾರದ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ಮೂಲ ವೇತನಕ್ಕೆ ರೂ.10/–ಗಳನ್ನು ಕಡಿತಗೊಳಿಸಿ ಮೂಲ ವೇತನದ ಜೊತೆಗೆ ಲಭ್ಯವಿರುವ ದಿನಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಲು ನಿರ್ಣಯಿಸಲಾಗಿತ್ತು. ಇದರ ಪ್ರಕಾರ ಆಡಳಿತಾತ್ಮಕ ಆದೇಶವನ್ನು ಕೂಡ ಹೊರಡಿಸಲಾಗಿದೆ. ಆದರೆ ಹಣಕಾಸು ವಿಭಾಗದವರು, ಆದೇಶವನ್ನು ಜಾರಿಗೊಳಿಸದೇ ಸಿಂಡಿಕೇಟ್ ನಿರ್ಣಯವನ್ನು ಆಕ್ಷೇಪಿಸುತ್ತಿದ್ದಾರೆ ಮತ್ತು ಉಲ್ಲಂಘಿಸುತ್ತಿದ್ದಾರೆ. ಇದು ಸರಿಯಲ್ಲ ಎಂದರು.

22/9/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451



Scanned with OKEN Scanner

ಮಾನ್ಯ ಕುಲಪತಿಯವರು ಮಾತನಾಡಿ, ಸಿಂಡಿಕೇಟ್ ನಿರ್ಣಯವಾಗಿದ್ದರೂ ಕೂಡ ಸರ್ಕಾರದ ಆದೇಶದ ಪ್ರಕಾರ ಅವಕಾಶವಿಲ್ಲ. ಈ ಬಗ್ಗೆ ಆಡಿಟ್ ಆಕ್ಷೇಪಣೆ ಕೂಡ ಆಗಿದೆ ಎಂದರು. ಶ್ರೀ ಬಿ.ಎಸ್.ಶಶಿಧರ್‌ರವರು ಮಾತನಾಡಿ, ಸರ್ಕಾರದ ವಿವಿಧ ಸಚಿವರು, ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಪ್ತ ಶಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ 7ನೇ ವೇತನ ಆಯೋಗದ ಪ್ರಕಾರ ಪರಿಷ್ಕೃತ ವೇತನ ನೀಡಲು ಅವಕಾಶವಿದೆ. ಸ್ವಾಯತ್ತ ಸಂಸ್ಥೆಯಾದ ವಿಶ್ವವಿದ್ಯಾಲಯವು ವಾಹನ ಚಾಲಕರ ವೇತನವನ್ನು ತನ್ನ ಆಂತರಿಕ ಸಂಪನ್ಮೂಲದಿಂದ ಪಾವತಿಸುತ್ತಿದ್ದು, ಸಿಂಡಿಕೇಟ್‌ನಲ್ಲಿ ನಿರ್ಣಯವಾಗಿರುವುದನ್ನು ಆಕ್ಷೇಪಣೆ ಮಾಡುವುದು ಸರಿಯಲ್ಲ. ಸಿಂಡಿಕೇಟ್ ನಿರ್ಣಯ ಹಾಗೂ ವಿಶ್ವವಿದ್ಯಾಲಯದ ಆಡಳಿತಾತ್ಮಕ ಆದೇಶವನ್ನು ಹಣಕಾಸು ವಿಭಾಗವು ಅನುಷ್ಠಾನಗೊಳಿಸಬೇಕು ಎಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯವು ಸ್ವಾಯತ್ತ ಸಂಸ್ಥೆಯಾಗಿದ್ದು, ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಸಿಬ್ಬಂದಿಗಳಿಗೆ ಅವಕಾಶ ನೀಡಿರುವಂತೆ, ನಮ್ಮಲ್ಲಿಯೂ ಸಿಂಡಿಕೇಟ್ ಅನುಮೋದನೆಯಂತೆ ವಿಸ್ತರಿಸುವ ಬಗ್ಗೆ ತಜ್ಞರ ಅಭಿಪ್ರಾಯ ತೆಗೆದುಕೊಂಡು ಈ ಬಗ್ಗೆ ಪರಿಶೀಲಿಸಬಹುದು. ಇದರ ಬಗ್ಗೆ ಇರುವ 2 ಆದೇಶಗಳು ಹಾಗೂ ಸಿಂಡಿಕೇಟ್ ನಿರ್ಣಯದ ಬಗ್ಗೆ ಕಾನೂನು ಅಭಿಪ್ರಾಯ ತೆಗೆದುಕೊಳ್ಳಬಹುದು. ಕಾನೂನು ಅಭಿಪ್ರಾಯ ಸಕಾರಾತ್ಮಕವಾಗಿ ಬಂದಲ್ಲಿ, ಅವರಿಂದ ನ್ಯಾಯಾಲಯದ ಅಂತಿಮ ಆದೇಶ ವ್ಯತಿರಿಕ್ತವಾಗಿ ಬಂದಲ್ಲಿ ವಿಶ್ವವಿದ್ಯಾಲಯ ತೆಗೆದುಕೊಳ್ಳುವ ಕ್ರಮಕ್ಕೆ ಬದ್ಧರಾಗಿರುವುದಾಗಿ ಮುಚ್ಚಳಿಕೆ ತೆಗೆದುಕೊಂಡು ಸೌಲಭ್ಯ ನೀಡಬಹುದು ಎಂದರು. ಇದಕ್ಕೆ ಸಭೆಯು ಒಪ್ಪಿತು.

**ನಿರ್ಣಯ:** ಮೇಲ್ಕಂಡಂತೆ ಚರ್ಚೆಯ ನಂತರ ಸಿಂಡಿಕೇಟ್ ಸದಸ್ಯರು, ಮಾನ್ಯ ಕುಲಪತಿಯವರು ಹಾಗೂ ಕುಲಸಚಿವರ ಅಭಿಪ್ರಾಯದಂತೆ ಕ್ರಮವಹಿಸಲು ನಿರ್ಣಯಿಸಲಾಯಿತು ಹಾಗೂ ನಂತರ ದಿನಾಂಕ:24–03–2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**2025–ಸಿಂ–5.01(ಎ):** ದಿನಾಂಕ:24–03–2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ಚರ್ಚೆ:** ಶ್ರೀ ಕೆ.ಪಿ. ಶ್ರೀಪಾಲ್‌ರವರು ವಿಷಯ ಸಂಖ್ಯೆ:2025–ಸಿಂ–3.01 ಬಗ್ಗೆ ಮಾತನಾಡಿ, ಪ್ರಸ್ತುತ ಇರುವ 426 ಹೊರಗುತ್ತಿಗೆ ಸಿಬ್ಬಂದಿಗಳಲ್ಲಿ ಟೆಂಡರ್ ಪ್ರಕಾರ 316 ಜನ ಮಾತ್ರ ಉಳಿಯುವಂತಾದಲ್ಲಿ ಸುಮಾರು 110 ಜನರನ್ನು ಕಡಿಮೆ ಮಾಡಬೇಕಾಗುತ್ತದೆ. ಇದರಿಂದ ಬಹಳಷ್ಟು ನೌಕರರಿಗೆ ತೊಂದರೆಯಾಗುತ್ತದೆ ಎಂದರು. ಕುಲಸಚಿವರು ಮಾತನಾಡಿ, ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯವರು ಸೂಚಿಸಿರುವ ಪ್ರಕಾರ ಹೊರಗುತ್ತಿಗೆ ನೌಕರರ ಸಂಖ್ಯೆಯು ಖಾಯಂ ಅಧ್ಯಾಪಕೇತರ ನೌಕರರ ಸಂಬಂಧಪಟ್ಟ ವೃಂದದಲ್ಲಿ ಮಂಜೂರಾಗಿರುವ ಹುದ್ದೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಯನ್ನು ಮೀರುವಂತಿಲ್ಲ. ಹೊರಗುತ್ತಿಗೆ ನೌಕರರು ಮತ್ತು ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿತಗೊಳಿಸದಿದ್ದಲ್ಲಿ, ಪಿಂಚಣಿ ಹಾಗೂ ಅಭಿವೃದ್ಧಿ ಅನುದಾನಗಳನ್ನು ಮಂಜೂರು ಮಾಡುವುದಿಲ್ಲ ಎಂದು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲದೇ ಇದರ ಕುರಿತಾಗಿ ಆಡಿಟ್ ಆಕ್ಷೇಪಣೆ ಕೂಡ ಆಗಿದೆ ಎಂದರು.

ಮುಂದುವರೆದು ಮಾತನಾಡಿದ ಕುಲಸಚಿವರು, ವಿಶ್ವವಿದ್ಯಾಲಯಕ್ಕೆ 1994ನೇ ಇಸವಿಯ ನಂತರದಲ್ಲಿ ಅಧ್ಯಾಪಕೇತರ ನೌಕರರ ಹುದ್ದೆಗಳು ಮಂಜೂರಾಗಿಲ್ಲ. ಆದರೂ ಆ ನಂತರದಲ್ಲಿ ವಿಶ್ವವಿದ್ಯಾಲಯವು ಸಾಕಷ್ಟು ಅಭಿವೃದ್ಧಿಯಾಗಿದ್ದು, ಅನೇಕ ಹೊಸ ವಿಭಾಗಗಳನ್ನು ತೆರೆಯಲಾಗಿದೆ ಹಾಗೂ ಎರಡು ಹೊಸ ಸ್ನಾತಕೋತ್ತರ ಕೇಂದ್ರಗಳು ಕೂಡ ಆರಂಭವಾಗಿವೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ನೌಕರರ ಅಗತ್ಯವಿದೆ ಎಂಬ ಮಾಹಿತಿಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೂಡ ಸಲ್ಲಿಸಲಾಗಿತ್ತು. ಆದರೆ, ಸರ್ಕಾರ ಇದನ್ನು ಒಪ್ಪುತ್ತಿಲ್ಲ. ನೌಕರರ ಸಂಖ್ಯೆಯನ್ನು ಕಡಿತಗೊಳಿಸದಿದ್ದಲ್ಲಿ, ಅನುದಾನ ನೀಡುವುದಿಲ್ಲ ಎಂಬುದನ್ನೇ ಪುನರುಚ್ಚರಿಸುತ್ತಿದ್ದಾರೆ. ವೆಚ್ಚ ಕಡಿತಗೊಳಿಸಬೇಕಾಗಿರುವುದರಿಂದ ಇದು ಅನಿವಾರ್ಯದ ಕ್ರಮ ಕೂಡ ಆಗಿದೆ ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

Scanned with OKEN Scanner

ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿತಗೊಳಿಸಲು ಯಾವ ಮಾನದಂಡ ಅನುಸರಿಸಲಾಗುತ್ತದೆ? ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಒಟ್ಟಾರೆ ಹೆಚ್ಚುವರಿ ಇರುವ ಹೊರಗುತ್ತಿಗೆ ಹುದ್ದೆಗಳನ್ನು ಕಡಿತಗೊಳಿಸಬೇಕು ಎಂದು ನಿರ್ಧಾರವಾಗಿದೆ. ಪ್ರಸ್ತುತ ಎರಡು ಸಂಸ್ಥೆಯವರಿಗೆ ಟೆಂಡರ್ ಆಗಿದೆ. ಇಬ್ಬರಿಗೂ ಒಟ್ಟಿಗೆ ಆದೇಶ ನೀಡಬೇಕು. ಎಲ್ಲಾ ಹೊರಗುತ್ತಿಗೆ ನೌಕರರನ್ನು ಹೊರಗೆ ಕಳುಹಿಸಿ ನಂತರ ಹೊಸದಾಗಿ ನೇಮಕ ಮಾಡಿದರೆ ಗೊಂದಲವಾಗದೇ ಅಗತ್ಯವಿರುವಷ್ಟು ಜನ ಬರುತ್ತಾರೆ. ಹುದ್ದೆಗಳನ್ನು ಕಡಿತಗೊಳಿಸಲು ನಮಗೂ ಕಷ್ಟವಾಗುತ್ತದೆ. ಆದರೆ, ಅವರಿಗೆ 2–3 ತಿಂಗಳುಗಳಿಂದ ವೇತನ ನೀಡದಿರುವುದರಿಂದ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ನೌಕರರ ಸಂಖ್ಯೆ ಕಡಿಮೆಯಾದಲ್ಲಿ ಸಕಾಲದಲ್ಲಿ ವೇತನ ನೀಡಲು ಪ್ರಯತ್ನಿಸಬಹುದು ಎಂದರು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ನೌಕರರ ಸಂಖ್ಯೆ ಕಡಿತಗೊಳಿಸಲು ಪರಿಶೀಲನೆ ಮಾಡಿ ಪಟ್ಟಿ ಸಿದ್ಧಪಡಿಸಿದ ನಂತರ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಕರೆದು ಚರ್ಚಿಸಿ ನಿರ್ಣಯಿಸಬೇಕು. ಸರ್ಕಾರದ ನಿಯಮದಂತೆ ಟೆಂಡರ್ ನಿಬಂಧನೆಗಳ ಪ್ರಕಾರ ಶೈಕ್ಷಣಿಕ ಅರ್ಹತೆ ಇಲ್ಲದವರನ್ನು ತೆಗೆಯುವುದಾಗಿ ತಿಳಿಸಿದ್ದಾರೆ. ಇದು ಸರಿ ಇದೆ. ಆದರೆ, ತೆಗೆಯುವಾಗ ಒಂದೇ ಕುಟುಂಬದಲ್ಲಿನ ಹೆಚ್ಚಿನ ಸಂಖ್ಯೆಯ ನೌಕರರು, ಹೊರಗುತ್ತಿಗೆಯಲ್ಲಿರುವ ಖಾಯಂ ನೌಕರರ ಕುಟುಂಬ, ನೌಕರರ ಸೇವಾ ಅವಧಿಯಲ್ಲಿನ ಗುಣನಡತೆಗಳು ಮತ್ತು ದೀರ್ಘ ಕಾಲದ ಸೇವಾ ಅವಧಿಯನ್ನು ಕೂಡ ಪರಿಗಣಿಸಬೇಕಾಗುತ್ತದೆ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ನಿರ್ದಿಷ್ಟ ಮಾನದಂಡಗಳನ್ನು ಇಟ್ಟುಕೊಂಡು ಸಂಖ್ಯೆಯನ್ನು ಕಡಿತಗೊಳಿಸಲು ಕ್ರಮ ಕೈಗೊಳ್ಳಬೇಕೆಂದರು.

ಕುಲಸಚಿವರು ಮಾತನಾಡಿ, ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಹೇಗೆ ಕಡಿತಗೊಳಿಸಬೇಕು ಎಂಬುದರ ಬಗ್ಗೆ ಏಜನ್ಸಿಯವರಿಗೆ ಪಟ್ಟಿ ಮಾಡಲು ತಿಳಿಸಿದೆ. ಸರ್ಕಾರದ ರೋಸ್ಟರ್‌ನ್ನು ಕೂಡ ಕಡ್ಡಾಯವಾಗಿ ಪಾಲಿಸಲೇಬೇಕು. ಉಳಿಯುವವರು ಮತ್ತು ಹೊರಹೋಗುವವರ ಪಟ್ಟಿ ಮಾಡಿ ಒಂದೇ ಕುಟುಂಬದಲ್ಲಿ ಒಬ್ಬರಿಗಿಂತ ಹೆಚ್ಚು ಜನ ಇರುವವರು, 10ನೇ ತರಗತಿ ಉತ್ತೀರ್ಣರಾಗದ ಅಟೆಂಡರ್‌ನ್ನು ಹೆಲ್ಪರ್ ಮಾಡುವುದು, ಸೇವಾ ನಡವಳಿಕೆ, ನೌಕರರ ಬಗ್ಗೆ ಇರುವ ದೂರುಗಳು, ಇತ್ತೀಚಿನ ದಿನಗಳಲ್ಲಿ ವಯೋನಿವೃತ್ತಿ ಹೊಂದಿರುವ ಖಾಯಂ ನೌಕರರ ಸ್ಥಾನಕ್ಕೆ ಹೊಂದಾಣಿಕೆ ಮಾಡುವುದು ಸೇರಿದಂತೆ ಒಂದು ಪ್ರಕ್ರಿಯೆ ನಡೆಸಲಾಗುವುದು. ಇದನ್ನು ಈ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಿ ಸಿಂಡಿಕೇಟ್ ಸದಸ್ಯರ ಒಂದು ಸಭೆಯನ್ನು ನಡೆಸಿ ಚರ್ಚಿಸಲಾಗುವುದು ಎಂದರು.

ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಕೆಲಸದಿಂದ ತೆಗೆಯಲು ಮಾನದಂಡ ಇದೆ. ಅದೇ ರೀತಿ ಉಳಿಸಿಕೊಳ್ಳಲು ಇರುವ ಮಾನದಂಡಗಳನ್ನು ಕೂಡ ಪರಿಶೀಲಿಸಬೇಕು. ಅವಕಾಶವಿದ್ದಲ್ಲಿ ಎಲ್ಲಾ ಸಿಂಡಿಕೇಟ್ ಸದಸ್ಯರು ಸರ್ಕಾರಕ್ಕೆ ತೆರಳಿ ಒಂದು ವಿವರವಾದ ಪ್ರಸ್ತಾವನೆ ಸಲ್ಲಿಸಿ ಮನವಿ ಮಾಡಬಹುದು. ಇದಕ್ಕಾಗಿ ಒಂದು ಸಮಿತಿ ರಚಿಸಿ. ಈ ಹಿಂದೆ ದೂರಶಿಕ್ಷಣ ಕೋರ್ಸ್‌ಗಳು ಇದ್ದುದ್ದರಿಂದ ಅಗತ್ಯಕ್ಕೆ ತಕ್ಕಂತೆ ಹೆಚ್ಚಿನ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿತ್ತು. ದೂರಶಿಕ್ಷಣ ಸ್ಥಗಿತವಾದ ನಂತರ ನೌಕರರ ಸಂಖ್ಯೆ ಹೆಚ್ಚಾಯಿತು. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು ಪ್ರತ್ಯೇಕವಾದ ಒಂದು ಸಭೆ ನಡೆಸಿ, ದೂರಶಿಕ್ಷಣವನ್ನು ಪುನರ್ ಆರಂಭಿಸುವ ಬಗ್ಗೆ ಚರ್ಚಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಅನುಕೂಲವಾಗುತ್ತದೆ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸದಸ್ಯರು, ಮಾನ್ಯ ಕುಲಪತಿಯವರು ಹಾಗೂ ಕುಲಸಚಿವರ ಅಭಿಪ್ರಾಯದಂತೆ ಕ್ರಮವಹಿಸಲು ನಿರ್ಣಯಿಸಲಾಯಿತು ಹಾಗೂ ನಂತರ ದಿನಾಂಕ:24–03–2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ



Scanned with OKEN Scanner

**2025–ಸಿಂ–5.02:** ದಿನಾಂಕ:20–05–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ಶ್ರೀ ಶಿವಕುಮಾರ್ ಎಂ.ರವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ನಾನು ಬಹಳಷ್ಟು ವಿಷಯಗಳ ಕುರಿತಾಗಿ ಚರ್ಚಿಸಿದ್ದೇನೆ. ಆದರೆ, ನನ್ನ ಹೆಸರನ್ನು ಹೆಚ್ಚಾಗಿ ಪ್ರಸ್ತಾಪಿಸಿಲ್ಲ, ಕೆಲವು ವಿಷಯಗಳ ಚರ್ಚೆಯನ್ನು ಮತ್ತು ನಿರ್ಣಯವನ್ನು ಸರಿಯಾಗಿ ನಮೂದಿಸಿಲ್ಲ ಎಂದರು. ಕುಲಸಚಿವರು ಮಾತನಾಡಿ, ವಿಷಯ ಸಂಖ್ಯೆ:2025–ಸಿಂ–4.01ರ ಚರ್ಚೆಯ ಕೊನೆಯ ಪ್ಯಾರಾದಲ್ಲಿ ತಿಳಿಸಿರುವಂತೆ ದಿನಾಂಕ:20–05–2025ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಅಧಿಕೃತವಾಗಿ ಪ್ರಕಟಿಸದೇ, ಸಿಂಡಿಕೇಟ್ ಸದಸ್ಯರಿಗೆ ಮಾತ್ರ ಕಳುಹಿಸಿ ಸಭೆಯಲ್ಲಿ ಚರ್ಚಿತವಾಗಿರುವುದಕ್ಕೂ ಮತ್ತು ಸಭಾ ನಡಾವಳಿಯಲ್ಲಿ ದಾಖಲಾಗಿರುವುದಕ್ಕೂ ವ್ಯತ್ಯಾಸವಿದ್ದಲ್ಲಿ, ಆಗಬೇಕಾಗಿರುವ ಬದಲಾವಣೆಗಳ ಬಗ್ಗೆ 7 ದಿನಗಳೊಳಗೆ ಲಿಖಿತವಾಗಿ ತಿಳಿಸಿದಲ್ಲಿ ಅಂತಿಮಗೊಳಿಸಿ ನಂತರ ಪ್ರಕಟಿಸಲಾಗುವುದು. 7 ದಿನಗಳೊಳಗೆ ಯಾವುದೇ ಮನವಿ ಬಾರದಿದ್ದಲ್ಲಿ ಅಂತಿಮಗೊಳಿಸಿ ಪ್ರಕಟಿಸಲಾಗುವುದು ಎಂದು ತಿಳಿಸಿರುವುದು ನಡಾವಳಿಯಲ್ಲಿ ದಾಖಲಾಗಿದ್ದು, ಅದೇ ನಡಾವಳಿಯ ಕರಡು ಪ್ರತಿಯನ್ನು ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ದಿನಾಂಕ:16–06–2025ರಂದು ಕಳುಹಿಸಲಾಗಿತ್ತು. ಸದಸ್ಯರುಗಳಾದ ಪ್ರೊ. ಸಾಕಮ್ಮ ಬಿ, ಶ್ರೀ ಲಕ್ಷ್ಮಿಕಾಂತ ಚಿಮನೂರು, ಶ್ರೀ ಶಿವಕುಮಾರ್ ಎಂ ಹಾಗೂ ಶ್ರೀ ಮುಸಾವೀರ್ ಬಾಷಾ ಎಂ. ರವರಿಂದ ತಿದ್ದುಪಡಿ/ಬದಲಾವಣೆ ಕುರಿತು ಲಿಖಿತ ಮನವಿ ಬಂದಿದ್ದು, ಅದನ್ನು ಪರಿಗಣಿಸಲು ಸಂಬಂಧಿಸಿದ ವಿಭಾಗಕ್ಕೆ ಕಳುಹಿಸಿದ್ದು, ನಂತರ ದಿನಾಂಕ: 01–07–2025 ರಂದು ಅಂತಿಮವಾಗಿ ಪ್ರಕಟಿಸಲಾಗಿದೆ ಎಂದರು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ವಿಷಯ ಸಂಖ್ಯೆ:2025–ಸಿಂ–4.20.1(ಎ) ಕುರಿತು ವಿವರವಾಗಿ ಮಾತನಾಡಿ, ಶ್ರೀ ಚಂದ್ರಕಾಂತ್ ಎಂ.ರವರಿಗೆ ಸಹಾಯಕ ಕುಲಸಚಿವರ ಹುದ್ದೆಗೆ 2006 ರಿಂದಲೇ ಪರಿಗಣಿಸುವುದಾದಲ್ಲಿ ಶ್ರೀಮತಿ ಸುಮನ್ ಎ. ಆಚಾರ್ ರವರಿಗೆ ಅವರ ಮನವಿ ಹಾಗೂ ಸರ್ಕಾರದ ಆದೇಶಗಳ ಹಿನ್ನೆಲೆಯಲ್ಲಿ ದಿನಾಂಕ:08–01–2007 ರಿಂದಲೇ ಸಹಾಯಕ ಕುಲಸಚಿವರ ಹುದ್ದೆಗೆ ಪರಿಗಣಿಸಲು ತಿಳಿಸಿದರು ಹಾಗೂ ಹೊರಗುತ್ತಿಗೆ ನೌಕರರಾದ ಶ್ರೀ ಪ್ರವೀಣ್ ಕುಮಾರ್ ಎಲ್. ರವರನ್ನು ವಾಹನ ಚಾಲಕರ ಹುದ್ದೆಗೆ ಪರಿಗಣಿಸಲು ತಿಳಿಸಿದರು. ಮತ್ತು ಉಳಿದ ಅರ್ಹ ನೌಕರರುಗಳಿಗೂ ಬಡ್ತಿ ನೀಡಿ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಶ್ರೀಮತಿ ಸುಮನ್ ಎ. ಆಚಾರ್ ಹಾಗೂ ಶ್ರೀಮತಿ ಅಮರಜ್ಯೋತಿರವರ ಪ್ರಕರಣವನ್ನು ಕೂಡ ಪರಿಶೀಲಿಸಿ ಇತ್ಯರ್ಥಪಡಿಸಿ ಎಂದರು. ಪ್ರೊ. ಸಾಕಮ್ಮ ಬಿ, ಶ್ರೀ ಶಿವಕುಮಾರ್ ಎಂ, ಶ್ರೀ ಮುಸಾವಿರ್ ಬಾಷಾ ಎಂ, ಶ್ರೀ ಲಕ್ಷ್ಮಿಕಾಂತ ಚಿಮನೂರ, ಡಾ.ಮಧು ಜಿ ಹಾಗೂ ಡಾ.ಅರವಿಂದರವರು ಮಾತನಾಡಿ ಎಲ್ಲಾ ಅರ್ಹ ನೌಕರರಿಗೆ ಕಾಲ ಕಾಲಕ್ಕೆ ಬಡ್ತಿ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಶ್ರೀ ಎಂ. ಚಂದ್ರಕಾಂತ್‌ರವರಿಗೆ ಬಡ್ತಿ ನೀಡಿಲ್ಲ. ಅವರ ಬಡ್ತಿ ದಿನಾಂಕದ ಪರಿಷ್ಕರಣೆ ಬಗ್ಗೆ ಪರಿಶೀಲಿಸಲಾಗಿದೆ. ಶ್ರೀಮತಿ ಸುಮನ್ ಎ. ಆಚಾರ್‌ರವರ ಪ್ರಕರಣವನ್ನು ಕೂಡ ಪವಿತ್ರ 1 ಮತ್ತು 2 ಪ್ರಕರಣಗಳ ಅಡಿಯಲ್ಲಿ ಮತ್ತೊಮ್ಮೆ ಪರಿಶೀಲಿಸಿ ಸಕಾರಾತ್ಮಕವಾಗಿ ಕ್ರಮ ಕೈಗೊಳ್ಳಲಾಗುವುದು ಎಂದರು. ನಮ್ಮ ಅವಧಿಯಲ್ಲಿ ಹಿರಿಯ ನೌಕರರು ನಿವೃತ್ತಿಯಾದ ಮರುದಿನದಿಂದಲೇ ಅನ್ವಯವಾಗುವಂತೆ ಕಿರಿಯ ನೌಕರರಿಗೆ ಬಡ್ತಿ ನೀಡಲಾಗುತ್ತಿದೆ. ಉಪಕುಲಸಚಿವ ಹುದ್ದೆಗೆ ಬಡ್ತಿ ನೀಡಿದಲ್ಲಿ ಕೆಳಗಿನ ಹಂತದ ನಾಲ್ವರಿಗೆ ಅನುಕೂಲವಾಗುತ್ತದೆ. ಉಪಕುಲಸಚಿವ ಹುದ್ದೆಯ ಬಡ್ತಿಗೆ ಸಂದರ್ಶನ ನಡೆಸಬೇಕಾಗಿದ್ದು, ಸ್ವೀಕೃತಅರ್ಜಿಗಳ ಪರಿಶೀಲನಾ ಹಂತದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳಿದ್ದು, ಪರಿಶೀಲಿಸಲಾಗುತ್ತಿದೆ. ಜೇಷ್ಠತಾ ಪಟ್ಟಿಯನ್ನು ಅನುಷ್ಠಾನಗೊಳಿಸುವಲ್ಲಿ ಆಗಿರುವ ಲೋಪಗಳ ಬಗ್ಗೆ ಪರಿಶೀಲಿಸಿ ಎಲ್ಲಾ ಅರ್ಹ ನೌಕರರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ಕುಲಸಚಿವರು ಮಾತನಾಡಿ ವಿಷಯ ಸಂಖ್ಯೆ:2025–ಸಿಂ–4.11 ಮತ್ತು2025–ಸಿಂ–4.12 ರ ಸಹ್ಯಾದ್ರಿ ವಿಜ್ಞಾನ ಕಾಲೇಜು ಹಾಗೂ ಸಹ್ಯಾದ್ರಿ ಕಲಾ ಕಾಲೇಜಿಗೆ ಮಂಜೂರಾಗಿರುವ ರೂಸಾ ಅನುದಾನದಲ್ಲಿ ಸರ್ಕಾರದ ಮಂಜೂರಾತಿ ಆದೇಶದಲ್ಲಿ ತಿಳಿಸಿರುವಂತೆ ಉಪಕರಣಗಳ ಖರೀದಿಯ ಇ–ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತ್ತು. ಆದರೆ, ಕೆಲ ಸದಸ್ಯರು ದಿನಾಂಕ:04–07–2025ರಂದು ಲಿಖಿತ ಮನವಿ ನೀಡಿ ಸದರಿ ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿಯುವಂತೆ ತಿಳಿಸಿದ್ದಾರೆ. ಆದರೆ, ಸದರಿ ಇ–ಟೆಂಡರ್ ಪ್ರಕ್ರಿಯೆಯನ್ನು ಸರ್ಕಾರದ ಕೆ.ಟಿ.ಪಿ.ಪಿ. ನಿಯಮಗಳ ಪ್ರಕಾರವೇ ಮಾಡಲಾಗಿದ್ದು, ಟೆಂಡರ್ ಪರಿಶೀಲನಾ ಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರು ಕೂಡ ಇದ್ದರು. ಅಲ್ಲಿ ಅವರು ಯಾವುದೇ ಆಕ್ಷೇಪಣೆ ವ್ಯಕ್ತಪಡಿಸಿಲ್ಲ. ಈಗ ಸದರಿ ಸದಸ್ಯರನ್ನು ಹೊರೆತುಪಡಿಸಿ ಬೇರೆ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿರುವುದು ಸರಿಯಲ್ಲ. ಮಂಜೂರಾಗಿರುವ ರೂಸಾ ಅನುದಾನವನ್ನು ಸಕಾಲದಲ್ಲಿ ವಿನಿಯೋಗಿಸದಿದ್ದಲ್ಲಿ, ಅನುದಾನವನ್ನು ಸರ್ಕಾರ ವಾಪಾಸ್ಸು ಪಡೆಯುತ್ತದೆ. ಇದರಿಂದ ವಿಶ್ವವಿದ್ಯಾಲಯಕ್ಕೆ ನಷ್ಟವಾಗುತ್ತದೆ ಎಂದರು.

ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿಯುವಂತೆ ತಿಳಿಸಿರುವ ಸದಸ್ಯರು ಇದಕ್ಕೆ ಪೂರಕ ಕಾರಣ ಹಾಗೂ ಸಮರ್ಪಕ ದಾಖಲೆಗಳನ್ನು ಒದಗಿಸಲ್ಲಿಲ್ಲವಾದ್ದರಿಂದ ಈಗಾಗಲೇ ಅನುಮೋದಿಸಿರುವಂತೆ ಉಪಕರಣಗಳನ್ನು ಖರೀದಿಸಲು ಹಾಗೂ ಬಿಲ್ಲಿನ ಮೊಬಲಗನ್ನು ಪಾವತಿಸಲು ಅಗತ್ಯ ಕ್ರಮವಹಿಸಲು ನಿರ್ಣಯಿಸಲಾಯಿತು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ವಿಷಯ ಸಂಖ್ಯೆ:2025–ಸಿಂ.22.3(ಸಿ)ರಲ್ಲಿ ಸರ್ಕಾರಿ ಕಾಲೇಜುಗಳಲ್ಲಿರುವ ಅರ್ಹ ಅಧ್ಯಾಪಕರಿಗೆ ಪಿಹೆಚ್.ಡಿ. ಗೈಡ್‌ಶಿಪ್ ನೀಡುವ ಬಗ್ಗೆ ಚರ್ಚಿಸಲಾಗಿತ್ತು. ಆದರೆ, ಯಾವುದೇ ಕ್ರಮ ಆಗಿಲ್ಲ ಎಂದರು.

ಕುಲಸಚಿವರು ಮಾತನಾಡಿ, ಯಾವುದೇ ಅಧ್ಯಾಪಕರು ಸಂಶೋಧನಾ ಮಾರ್ಗದರ್ಶಕರೆಂದು ಮಾನ್ಯತೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿಲ್ಲ. ಸಲ್ಲಿಸಿದಲ್ಲಿ ಯು.ಜಿ.ಸಿ. ನಿಯಮಗಳ ಅನ್ವಯ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಹಾಗೂ ಈ ಬಗ್ಗೆ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಲಾಗುವುದು ಎಂದರು.

**ನಿರ್ಣಯ:** ಮೇಲಿನ ಚರ್ಚೆ ಹಾಗೂ ನಿರ್ಣಯಗಳನ್ನು ಅನುಷ್ಠಾನಗೊಳಿಸುವಂತೆ ನಿರ್ಣಯಿಸಿ, ದಿನಾಂಕ:20–05–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**2025–ಸಿಂ–5.02(ಎ):** STATUTES RELATING TO QUALIFICATION AND METHODS OF RECRUITMENT AND PROMOTION FROM THE POST OF LIBRARY ASSISTANTS TO ASSISTANT LIBRARIANS IN KUVEMPU UNIVERSITY AND ITS CONSTITUENT COLLEGES – 2025 ಅನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.

**ನಿರ್ಣಯ:** ಪರಿಶೀಲನೆ ಮತ್ತು ಚರ್ಚೆಯ ನಂತರ STATUTES RELATING TO QUALIFICATION AND METHODS OF RECRUITMENT AND PROMOTION FROM THE POST OF LIBRARY ASSISTANTS TO ASSISTANT LIBRARIANS IN KUVEMPU UNIVERSITY AND ITS CONSTITUENT COLLEGES–2025 ಅನ್ನು ಸಭೆಯು ಅನುಮೋದಿಸಿತು.

**2025–ಸಿಂ–5.02(ಬಿ):** ಸ್ನಾತಕ/ಸ್ನಾತಕೋತ್ತರ ಸಂಯುಕ್ತ ಹಿಂದಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಮತ್ತು ಸ್ನಾತಕೋತ್ತರ ಸಂಯುಕ್ತ ಹಿಂದಿ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಆದೇಶದನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

2025–ಸಿಂ–5.02(ಸಿ): ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲು ಶೋಧನಾ ಸಮಿತಿಗೆ ತಜ್ಞರ ನೇಮಕದ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲು ಅರ್ಹ ಗಣ್ಯ ವ್ಯಕ್ತಿಗಳನ್ನು ಆಯ್ಕೆ ಮಾಡಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000ರ ಪ್ರಕರಣ 69ರನ್ವಯ ಮಾನ್ಯ ಕುಲಾಧಿಪತಿಗಳಿಂದ ರಚಿತವಾಗುವ ಶೋಧನಾ ಸಮಿತಿಗೆ ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಯವರಾದ ಪ್ರೊ. ಜೋಗನ್ ಶಂಕರ್‌ರವರನ್ನು ತಜ್ಞರಾಗಿ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

2025–ಸಿಂ–5.02(ಡಿ): 35ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸುವ ಗಣ್ಯರ ಪರಿಷ್ಕೃತ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮತ್ತು ಸ್ಥಿರೀಕರಣಕ್ಕೆ ಮಂಡಿಸುವ ಬಗ್ಗೆ.

ಚರ್ಚೆ: ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಹ್ವಾನಿಸಲು ದಿನಾಂಕ:20–05–2025 ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2025–ಸಿಂ–4.03ರಲ್ಲಿ ಅನುಮೋದಿಸಿದ ಗಣ್ಯರ ಪಟ್ಟಿಯನ್ನು ಮಾನ್ಯ ಕುಲಾಧಿಪತಿಯವರ ಅನುಮೋದನೆಗಾಗಿ ದಿನಾಂಕ:25–06–2025 ರಂದು ಸಲ್ಲಿಸಲಾಗಿತ್ತು. ಆದರೆ, ದಿನಾಂಕ:27–06–2025ರಂದು ಮಾನ್ಯ ಕುಲಾಧಿಪತಿಯವರ ಕಛೇರಿಯಿಂದ ಸ್ವೀಕೃತವಾದ ಪತ್ರದಲ್ಲಿ ಘಟಿಕೋತ್ಸವ ಸಮಾರಂಭಗಳಿಗೆ ವಿಶ್ವವಿದ್ಯಾಲಯ ಹಾಗೂ ವಿದ್ಯಾರ್ಥಿಗಳಿಗೆ ಉತ್ತೇಜಿಸುವಂತಹ ಹಾಗೂ ಮಾದರಿಯಾಗಬಹುದಾದಂತಹ ಹಿರಿಯ ವಿಜ್ಞಾನಿಗಳು ಅಥವಾ ಶಿಕ್ಷಣ ತಜ್ಞರನ್ನು ಆಹ್ವಾನಿಸುವಂತೆ ತಿಳಿಸಿ ಸಂಪೂರ್ಣ ಮಾಹಿತಿಯೊಂದಿಗೆ ಪುನಃ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಿರುವುದರಿಂದ ಮತ್ತು 35ನೇ ಘಟಿಕೋತ್ಸವವನ್ನು ಆದಷ್ಟು ಶೀಘ್ರದಲ್ಲಿ ಏರ್ಪಡಿಸಬೇಕಾಗಿರುವ ಹಿನ್ನೆಲೆಯಲ್ಲಿ ಮುಖ್ಯ ಅತಿಥಿಗಳಾಗಿ ಆಹ್ವಾನಿಸಬಹುದಾದ ಸಂಭಾವ್ಯ 10 ಗಣ್ಯರ ಪಟ್ಟಿಯನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಾಧಿಪತಿಯವರಿಗೆ ದಿನಾಂಕ:07–07–2025ರಂದು ಕಳುಹಿಸಿದ್ದು, ಇದನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಮತ್ತು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್ ಮತ್ತು ಶ್ರೀ ಶಿವಕುಮಾರ್‌ರವರು ಮಾತನಾಡಿ ಸಿಂಡಿಕೇಟ್‌ನಿಂದ ಉತ್ತಮ ವ್ಯಕ್ತಿಗಳನ್ನೇ ಆಯ್ಕೆ ಮಾಡಲಾಗಿತ್ತು. ಜಸ್ಟೀಸ್ ಶ್ರೀ ಎಲ್. ನಾರಾಯಣಸ್ವಾಮಿರವರು ಕುವೆಂಪು ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ ಕೂಡ ಆಗಿದ್ದರು ಎಂದರು.

ನಿರ್ಣಯ: ಚರ್ಚೆಯ ನಂತರ, ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಹ್ವಾನಿಸುವ ಗಣ್ಯರ ಪರಿಷ್ಕೃತ ಪಟ್ಟಿಯನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಾಧಿಪತಿಗಳಿಗೆ ಕಳುಹಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

2025–ಸಿಂ–5.02(ಇ): ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಸಂದರ್ಭದಲ್ಲಿ ಪ್ರಧಾನ ಮಾಡುವ ಗೌರವ ಡಾಕ್ಟರೇಟ್ ಪದವಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ತಜ್ಞರ ಸಮಿತಿ ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ, ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಧಾನ ಮಾಡುವ ಗೌರವ ಡಾಕ್ಟರೇಟ್ ಪದವಿಗೆ ಸ್ವೀಕೃತವಾಗುವ ಅರ್ಜಿಗಳು ಹಾಗೂ ಸ್ವ–ವಿವರಗಳನ್ನು ಪರಿಶೀಲಿಸಿ ಅರ್ಹ ಗಣ್ಯರ ಪಟ್ಟಿಯನ್ನು ಸಿದ್ಧಪಡಿಸಲು ಮಾನ್ಯ ಕುಲಪತಿಯವರ ಅಧ್ಯಕ್ಷತೆಯ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

01. ಮಾನ್ಯ ಕುಲಪತಿಗಳು – ಅಧ್ಯಕ್ಷರು
02. ಶ್ರೀ ಲಕ್ಷ್ಮಿಕಾಂತ ಚಿಮನೂರ – ಸದಸ್ಯರು
03. ಡಾ. ಕೆ.ಎಲ್. ಅರವಿಂದ – ಸದಸ್ಯರು
04. ಡೀನರ ಕೋಟಾದಿಂದ ಸಿಂಡಿಕೇಟ್ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶಿತರಾದ ಡೀನರು.
05. ಉಪಕುಲಸಚಿವರು, ಪ್ರಾಧಿಕಾರ ವಿಭಾಗ– ಸಂಚಾಲಕರು

**2025–ಸಿಂ–5.02(ಎಫ್):** ದಿನಾಂಕ:20–05–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:20–05–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

## ಶೈಕ್ಷಣಿಕ ವಿಭಾಗ

**2025–ಸಿಂ–5.03:** "Smt. Sundaramma Venkataramaiah Gold Medal" ಹೆಸರಿನಲ್ಲಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಶ್ರೀ ವಿ.ಜಿ. ಪ್ರಸಾದ್ ಬಿನ್ ಪ್ರೊ.ಪಿ.ವೆಂಕಟರಾಮಯ್ಯ, ಕುವೆಂಪುನಗರ, ಮೈಸೂರು ಇವರು "Smt. Sundaramma Venkataramaiah Gold Medal" ಹೆಸರಿನಲ್ಲಿ 2024–25ನೇ (35ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಗೆ (ಮಹಿಳಾ ವಿದ್ಯಾರ್ಥಿ)** ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

ಮುಂದುವರೆದು, ಪ್ರೊ.ಸಾಕಮ್ಮರವರ ಸಲಹೆಯಂತೆ ಇನ್ನು ಮುಂದೆ ಸ್ವರ್ಣಪದಕ, ನಗದು ಬಹುಮಾನ ಸೇರಿದಂತೆ ದತ್ತಿನಿಧಿಯ ದಾನಿಗಳನ್ನು ಸಿಂಡಿಕೇಟ್ ಸಭೆಗೆ ಆಹ್ವಾನಿಸಿ ಅಭಿನಂದನಾ ಪತ್ರದೊಂದಿಗೆ ಗೌರವಿಸಲು ಹಾಗೂ ಶ್ರೀ ಶಿವಕುಮಾರ್ ಮತ್ತು ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರ ಸಲಹೆಯಂತೆ ಘಟಿಕೋತ್ಸವದ ಆಹ್ವಾನಪತ್ರಿಕೆ ಮತ್ತು ಘಟಿಕೋತ್ಸವದಂದು ಸ್ವರ್ಣಪದಕ/ನಗದು ಬಹುಮಾನ ವಿತರಿಸುವ ವಿದ್ಯಾರ್ಥಿ/ನಿಯ ವಿವರದೊಂದಿಗೆ ಅಭಿನಂದನಾ ಪತ್ರವನ್ನು ದಾನಿಗಳಿಗೆ ವಿತರಿಸಲು ಕ್ರಮ ವಹಿಸುವಂತೆ ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2025–ಸಿಂ–5.04:** 2025–26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾ1ಲಯದ ಎಲ್ಲಾ ಸ್ನಾತಕೋತ್ತರ ಪದವಿಗಳ ಶುಲ್ಕಗಳ ಪರಿಷ್ಕರಣೆ ಮಾಡಿರುವ ಕುರಿತು.

**ನಿರ್ಣಯ:** ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಶುಲ್ಕ ಮತ್ತು ಸಂಭಾವನೆಯ ದರಗಳನ್ನು ನಿಗದಿಪಡಿಸಿದೆ. ಅದರಂತೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ವಿವಿಧ ಶುಲ್ಕಗಳನ್ನು ಪರಿಷ್ಕರಿಸುವ ಸಲುವಾಗಿ ದಿನಾಂಕ:22–05–2025ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿಯ ಸಭೆಯಲ್ಲಿ ಚರ್ಚಿಸಿದ್ದು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಗ್ರಾಮೀಣ ಪ್ರದೇಶದವರಾಗಿದ್ದು, ಆರ್ಥಿಕವಾಗಿ ಹಿಂದುಳಿದವರಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಏಕರೂಪ ಶುಲ್ಕಗಳನ್ನು ಜಾರಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ ಎಂಬುದನ್ನು ಪರಿಗಣಿಸಿ, ಎಲ್ಲಾ ಸ್ನಾತಕೋತ್ತರ ಪದವಿಯ ಶುಲ್ಕಗಳನ್ನು ಶೇ.40ರಷ್ಟು ಹೆಚ್ಚಿಸಲು ನಿರ್ಣಯಿಸಿರುವುದನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

2025–ಸಿಂ–5.05: 2025–26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಗಳ ವಿವಿಧ ಪ್ರಮಾಣ ಪತ್ರಗಳ ಶುಲ್ಕಗಳನ್ನು ಪರಿಷ್ಕರಣೆ ಮಾಡಿರುವ ಕುರಿತು.

ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಶುಲ್ಕಗಳನ್ನು ನಿಗದಿಪಡಿಸಿದ್ದು, ಅದರಂತೆ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ವಿವಿಧ ಪ್ರಮಾಣಪತ್ರಗಳ ಶುಲ್ಕಗಳನ್ನು ಪರಿಷ್ಕರಿಸುವ ಸಲುವಾಗಿ ದಿನಾಂಕ:22–05–2025ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿಯ ಸಭೆಯಲ್ಲಿ ಚರ್ಚಿಸಿದ್ದು, ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಗ್ರಾಮೀಣ ಪ್ರದೇಶದವರಾಗಿದ್ದು, ಆರ್ಥಿಕವಾಗಿ ಹಿಂದುಳಿದವರಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಏಕರೂಪ ಶುಲ್ಕಗಳನ್ನು ಜಾರಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ ಎಂಬುದನ್ನು ಪರಿಗಣಿಸಿ, 2025–26ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ವಿವಿಧ ಪ್ರಮಾಣಪತ್ರಗಳ ಶುಲ್ಕಗಳನ್ನು ಶೇ.40ರಷ್ಟು ಹೆಚ್ಚಿಸಲು ನಿರ್ಣಯಿಸಿದ್ದು, ಅದರಂತೆ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮೋದನೆಯನುಸಾರ 2025–26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಗಳ ವಿವಿಧ ಪ್ರಮಾಣ ಪತ್ರಗಳ ಶುಲ್ಕಗಳನ್ನು ಪರಿಷ್ಕರಣೆ ಮಾಡಿ ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

2025–ಸಿಂ–5.06: 2024–25ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಯ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಣೆ ಮಾಡಿರುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ. ಪದವಿಯ ವಿವಿಧ ಶುಲ್ಕಗಳನ್ನು ಕೆಲವು ವರ್ಷಗಳಿಂದ ಪರಿಷ್ಕರಿಸದಿರುವ ಹಿನ್ನೆಲೆಯಲ್ಲಿ, ದಿನಾಂಕ:22–05–2025ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ ಪರಿಷ್ಕರಿಸಲಾಗಿದ್ದು, ಇದನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಯವರ ಆದೇಶದ ಮೇರೆಗೆ ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಯ ವಿವಿಧ ಶುಲ್ಕಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

2025–ಸಿಂ–5.07: "Pfof. A.N. Rajeshwara – Biochemistry Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ Research Alumni of Prof. A. N. Rajeshwara, Dept. of Biochemistry, Kuvempu University ಇವರು "Prof. A. N. Rajeshwara - Biochemistry Gold Medal" ಹೆಸರಿನಲ್ಲಿ 2024–25ನೇ ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ** ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

2025–ಸಿಂ–5.07(ಎ): "Prof. H.S. Bhojya Naik – Industrial chemistry Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ Prof. H.S. Bhojya Naik Research Group, Department of Industrial Chemistry, Kuvempu University, Shankaraghatta – ಇವರು "Prof. H.S. Bhojya Naik - Industrial Chemistry Gold Medal" ಹೆಸರಿನಲ್ಲಿ 2024–25ನೇ (35ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ**



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

2025–ಸಿಂ–5.07(ಬಿ): "Family member of Prof A.N. Rajeshwara and Soumyarani Rajeshwara Achur, Lokanathpura, Koppa Taluk Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ Prof. A. N. Rajeshwara, Dept. of Biochemistry, Kuvempu University, Shankarghatta, Shivamogga – ಇವರು "Family members of Prof. A. N. Rajeshwara and Soumyarani Rajeshwara, Achur, Lokanathpura, Koppa Taluk Gold Medal" ಹೆಸರಿನಲ್ಲಿ 2025–26ನೇ (36ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಷಯದಲ್ಲಿ ದ್ವಿತೀಯ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

## ಪರೀಕ್ಷಾ ವಿಭಾಗ

**2025–ಸಿಂ–5.08:** ದಿನಾಂಕ:30–06–2025 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

ಚರ್ಚೆ: ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಜನವರಿ/ಫೆಬ್ರವರಿ–2025ರಲ್ಲಿ ನಡೆದ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಳಲ್ಲಿ ಅಕ್ರಮ ಎಸಗಿರುವ ವಿದ್ಯಾರ್ಥಿಗಳಿಗೆ ದಿನಾಂಕ:30–06–2025ರಂದು ನಿವೃತ್ತ ಜಿಲ್ಲಾ ನ್ಯಾಯಾದೀಶರ ನೇತೃತ್ವದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯಲ್ಲಿ ವಿಚಾರಣೆ ನಡೆಸಲಾಗಿದ್ದು, ತಪ್ಪಿತಸ್ಥ ವಿದ್ಯಾರ್ಥಿಗಳಿಗೆ ದಂಡ ವಿಧಿಸಲಾಗಿದೆ. ಸದರಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ಸಮಿತಿಯ ನಡಾವಳಿಗಳಿಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ನಿರ್ಣಯ ಪತ್ರಗಳನ್ನು ವಿದ್ಯಾರ್ಥಿಗಳಿಗೆ ಈಗಾಗಲೇ ಕಳುಹಿಸಿಕೊಡಲಾಗಿದೆ. ಈ ಹಿನ್ನಲೆಯಲ್ಲಿ ಸದರಿ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ ಎಂದರು.

ಮುಂದುವರೆದು ಮಾತನಾಡಿದ ಅವರು, ಪರೀಕ್ಷೆಗಳಲ್ಲಿ ಅಕ್ರಮ ಎಸಗಿದ ವಿದ್ಯಾರ್ಥಿಗಳಿಗೆ ಪ್ರಸ್ತುತ ಕನಿಷ್ಟ ರೂ.250/–ಗಳಷ್ಟು ದಂಡ ವಿಧಿಸಲಾಗುತ್ತಿದೆ. ದಂಡದ ಮೊತ್ತ ಕಡಿಮೆ ಇರುವುದರಿಂದ ವಿದ್ಯಾರ್ಥಿಗಳಿಗೆ ದಂಡದ ಭಯ ಇರುವುದಿಲ್ಲ. ಇದನ್ನು ಹೆಚ್ಚಿಸಬೇಕು ಎಂದರು. ಶ್ರೀ ಹೆಚ್.ಜಿ. ಅರವಿಂದ್‌ರವರು ಮಾತನಾಡಿ, ಈ ಹಿಂದೆ ಪರೀಕ್ಷಾ ಅಕ್ರಮ ಎಸಗಿದವರನ್ನು 2–3 ವರ್ಷಗಳ ಕಾಲ **'ಡಿಬಾರ್'** ಮಾಡಲಾಗುತ್ತಿತ್ತು. ಈಗ ಅಕ್ರಮ ಎಸಗಿದ ಸಂಬಂಧಪಟ್ಟ ಒಂದು ಪರೀಕ್ಷೆಯನ್ನು ಹೊರತುಪಡಿಸಿ ಉಳಿದ ಪರೀಕ್ಷೆಗಳನ್ನು ಬರೆಯಲು ಅವಕಾಶ ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ಶಿಕ್ಷೆ ಹಾಗೂ ದಂಡದ ಭಯವಿಲ್ಲ. ಆದುದರಿದ, ದಂಡದ ಪ್ರಮಾಣವನ್ನು ರೂ.25,000/–ಗಳಿಗೆ ಹೆಚ್ಚಿಸಬೇಕು ಎಂದರು. ಶ್ರೀ ಶಿವಕುಮಾರ್‌ರವರು ಕೂಡ ಇದಕ್ಕೆ ಧ್ವನಿಗೂಡಿಸಿದರು. ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ಕೇಶವರವರು ಮಾತನಾಡಿ, ಬಡ ವಿದ್ಯಾರ್ಥಿಗಳಿಗೆ ರೂ.25,000/– ತುಂಬಾ ಹೊರೆಯಾಗುತ್ತದೆ ಎಂದರು. ಡಾ.ಕೆ.ಎಲ್. ಅರವಿಂದ, ಶ್ರೀ ಉಲ್ಲಾಸ್, ಡಾ.ಜಿ.ಮಧು ಮತ್ತು ಡಾ.ಶೈಲಜಾ ಎಸ್. ಹೊಸಳ್ಳೇರರವರು ಮಾತನಾಡಿ, ದಂಡದ ಪ್ರಮಾಣವನ್ನು ಕಡಿಮೆ ಮಾಡುವಂತೆ ವಿನಂತಿಸಿದರು.

ನಿರ್ಣಯ: ಚರ್ಚೆಯ ನಂತರ, ದಿನಾಂಕ:30–06–2025ರಂದು ನಿವೃತ್ತ ಜಿಲ್ಲಾ ನ್ಯಾಯಾದೀಶರ ನೇತೃತ್ವದಲ್ಲಿ ನಡೆದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಿದ ಸಭೆಯು, ತಪ್ಪಿತಸ್ಥ 57 ವಿದ್ಯಾರ್ಥಿಗಳಿಗೆ ದಂಡ ವಿಧಿಸಿ, ಸದರಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ಸಮಿತಿಯ ನಡಾವಳಿಗಳಿಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ನಿರ್ಣಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577

Scanned with OKEN Scanner

ಪತ್ರಗಳನ್ನು ವಿದ್ಯಾರ್ಥಿಗಳಿಗೆ ಕಳುಹಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಿತು.

ಮುಂದುವರೆದು, ಇನ್ನು ಮುಂದೆ, ಪರೀಕ್ಷಾ ಅಕ್ರಮ ಎಸಗಿದ ವಿದ್ಯಾರ್ಥಿಗಳಿಗೆ ವಿಧಿಸುವ ದಂಡದ ಪ್ರಮಾಣವನ್ನು ಕನಿಷ್ಠ ರೂ.5,000/-ಗಳಿಗೆ ನಿಗದಿಪಡಿಸಲು ಹಾಗೂ ಮುಂದಿನ ದಿನಗಳಲ್ಲಿ ಮತ್ತೊಂದು ಬಾರಿ ಪರೀಕ್ಷಾ ಅಕ್ರಮಗಳನ್ನು ಪುನರಾವರ್ತಿಸುವ ವಿದ್ಯಾರ್ಥಿಗಳಿಗೆ ಪ್ರಥಮ ಬಾರಿಗೆ ವಿಧಿಸಿದ್ದ ದಂಡವನ್ನು ದ್ವಿಗುಣಗೊಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2025-ಸಿಂ-5.09:** ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಪ್ರತಿ ವರ್ಷ ಶೇ.10ರಷ್ಟು ಹೆಚ್ಚಿಸಿ ಪರಿಷ್ಕರಿಸಲಾಗುತ್ತಿದೆ. 2024-25ನೇ ಸಾಲಿನಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಪ್ರತಿ ವರ್ಷದಂತೆ ಶೇಕಡಾ.10ರಷ್ಟನ್ನು ಹೆಚ್ಚಿಸಿ ಪರಿಷ್ಕರಿಸುವ ಕುರಿತಂತೆ ಅನುಮೋದನೆಗಾಗಿ ದಿನಾಂಕ:19-07-2024 ರಂದು ಜರುಗಿದ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಿದಾಗ ರಾಜ್ಯದ ಇತರೆ ವಿಶ್ವವಿದ್ಯಾಲಯಗಳಲ್ಲಿರುವ ಶುಲ್ಕಗಳ ಕುರಿತಂತೆ ಮಾಹಿತಿ ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸುವಂತೆ ನಿರ್ಣಯವಾಗಿತ್ತು. ಸಿಂಡಿಕೇಟ್ ನಿರ್ಣಯದ ಪ್ರಕಾರ ರಾಜ್ಯದ ಇತರೆ ವಿಶ್ವವಿದ್ಯಾಲಯಗಳಿಗೆ ಈ ಕುರಿತು ಮಾಹಿತಿ ನೀಡಲು ಪತ್ರಿಸಲಾಗಿತ್ತು. ಆದರೆ ಬಹಳಷ್ಟು ವಿಶ್ವವಿದ್ಯಾಲಯಗಳಿಂದ ಮಾಹಿತಿಗಳು ಬಾರದೇ ಇದ್ದಾಗ ದಿನಾಂಕ:19-11-2024 ರಂದು ಜರುಗಿದ ಸಿಂಡಿಕೇಟ್ ಸಭೆಗೆ ಈ ವಿಷಯನ್ನು ಮಂಡಿಸಿದ್ದು, ಶೇಕಡಾ.10ರಷ್ಟನ್ನು ಹೆಚ್ಚಿಸಿ ಪರಿಷ್ಕರಿಸಲು ಸಭೆಯಲ್ಲಿ ನಿರ್ಣಯವಾಗಿದ್ದರಿಂದ 2024-25ನೇ ಸಾಲಿನಲ್ಲಿ ಶುಲ್ಕಗಳನ್ನು ಶೇಕಡಾ.10ರಷ್ಟನ್ನು ಹೆಚ್ಚಿಸಿ ಪರಿಷ್ಕರಿಸಲಾಗಿರುತ್ತದೆ. ಪ್ರಸ್ತುತ, 2025-26ನೇ ಸಾಲಿನಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಅಂಕಪಟ್ಟಿ/ಪದವಿ ಪ್ರಮಾಣ ಪತ್ರ, ತಾತ್ಕಾಲಿಕ ಪ್ರಮಾಣ ಪತ್ರ, ನೈಜತೆ ಪ್ರಮಾಣ ಪತ್ರ ಮತ್ತು ಇತರೆ ಪ್ರಮಾಣ ಪತ್ರಗಳ ಶುಲ್ಕಗಳನ್ನು ಶೇಕಡಾ 10 ಅಥವಾ 15ರಷ್ಟು ಹೆಚ್ಚಿಸುವ ಕುರಿತಂತೆ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ ಎಂದರು. ಸದಸ್ಯರಾದ ಡಾ.ಕೆ.ಎಲ್. ಅರವಿಂದರವರು ಮಾತನಾಡಿ, ಪ್ರತಿ ವರ್ಷ ಶುಲ್ಕ ಹೆಚ್ಚಿಸಿದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದರು. ಶ್ರೀ ಉಲ್ಲಾಸ್‌ರವರು ಕೂಡ ಧ್ವನಿಗೂಡಿಸಿದರು. ಕುಲಸಚಿವ (ಮೌಲ್ಯಮಾಪನ)ರವರು ಮಾಹಿತಿ ನೀಡುತ್ತಾ, ಪರೀಕ್ಷೆಗೆ ಸಂಬಂಧಿಸಿದ ಶುಲ್ಕಗಳನ್ನು ಶೇ.15ರಷ್ಟು ಹೆಚ್ಚಿಸಿದಾಗ್ಯೂ, ಸರ್ಕಾರದ ಏಕರೂಪದ ಶುಲ್ಕಗಳಿಗಿಂತ ಗಣನೀಯ ಕಡಿಮೆ ಇರುತ್ತದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, 2025-26ನೇ ಸಾಲಿನಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಅಂಕಪಟ್ಟಿ/ಪದವಿ ಪ್ರಮಾಣ ಪತ್ರ, ತಾತ್ಕಾಲಿಕ ಪ್ರಮಾಣ ಪತ್ರ, ನೈಜತೆ ಪ್ರಮಾಣ ಪತ್ರ ಮತ್ತು ಇತರೆ ಪ್ರಮಾಣ ಪತ್ರಗಳ ಶುಲ್ಕಗಳನ್ನು ಪರಿಷ್ಕರಿಸಿ ಶೇಕಡಾ 10ರಷ್ಟು ಹೆಚ್ಚಿಸಲು ಸಭೆಯು ನಿರ್ಣಯಿಸಿತು.

**2025-ಸಿಂ-5.10:** ದಿನಾಂಕ:08-05-2025 ಹಾಗೂ 09-05-2025 ರಂದು ನಡೆದ ವಿವಿಧ ನಿಕಾಯಗಳ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳ ಸ್ಥಿರೀಕರಣ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ದ ಪ್ರಕರಣ 36(3) ರನ್ವಯ ದಿನಾಂಕ:08-05-2025 ಹಾಗೂ 09-05-2025ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರೀಕ್ಷಕರ ನೇಮಕಾತಿ ಮಂಡಳಿಗಳ ಸಭೆಯಲ್ಲಿ ರಚಿಸಲಾದ ಪರೀಕ್ಷಾ ಮಂಡಳಿಗಳನ್ನು ಅನುಮೋದಿಸಿದ ಸಭೆಯು, ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ಪ್ರಕ್ರಿಯೆಗಳಲ್ಲಿ ಪರೀಕ್ಷಾ ಮಂಡಳಿಗಳು ತುರ್ತಾಗಿ ತೊಡಗಿಸಿಕೊಳ್ಳಬೇಕಾದ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಸಿಂಡಿಕೇಟ್ ಸಭೆಯ ನಿರ್ಣಯ ಕಾಯ್ದಿರಿಸಿ, ಪರೀಕ್ಷಕರ ನೇಮಕಾತಿ ಮಂಡಳಿಗಳ ಶಿಫಾರಸ್ಸಿನ ಅನುಸಾರ ವಿವಿಧ ಪರೀಕ್ಷಾ ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಿ ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025–ಸಿಂ–5.10(ಎ):** ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆ ಖರೀದಿಗೆ ಸಂಬಂಧಪಟ್ಟ ಟೆಂಡರ್‌ನ ಅನುಮೋದನೆ ಕುರಿತು.

**ನಿರ್ಣಯ:-** ವಿಶ್ವವಿದ್ಯಾಲಯದ ರೆಗ್ಯುಲರ್ ಹಾಗೂ ದೂರಶಿಕ್ಷಣ ಕೋರ್ಸ್‌ಗಳ ಸ್ನಾತಕ ಮತ್ತು ಸ್ನಾತಕೋತ್ತರ ಮತ್ತಿತರ ಪರೀಕ್ಷೆಗಳಿಗೆ ಅಗತ್ಯವಿರುವ ರಹಸ್ಯ ಮತ್ತು ರಕ್ಷಣಾತ್ಮಕ ಗುಣಗಳು ಹಾಗೂ multiple laser printed bar coded in every page and OMR Printing ಒಳಗೊಂಡಿರುವ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು ನಡೆಸಲಾದ ಇ–ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2025–ಸಿಂ–5.11:** ಸಹ್ಯಾದ್ರಿ ಕಲಾ ಕಾಲೇಜಿನ ಪ್ರಾಚಾರ್ಯರ (ಪ್ರಭಾರ) – ಹುದ್ದೆಗೆ ನೇಮಕ ಮಾಡಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜಿನ ಪ್ರಾಂಶುಪಾಲರಾಗಿದ್ದ ಡಾ. ಸೈಯದ್ ಸನಾವುಲ್ಲರವರು ದಿನಾಂಕ:31–07–2025 ರಂದು ವಯೋನಿವೃತ್ತಿ ಹೊಂದಿದ ಪ್ರಯುಕ್ತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಬೋಧಕ ವೃಂದದ ಸಂಯುಕ್ತ ಜೇಷ್ಠತಾ ಪಟ್ಟಿಯನುಸಾರ ಹಿರಿಯ ಅಧ್ಯಾಪಕರನ್ನು ಪ್ರಭಾರಿ ಪ್ರಾಂಶುಪಾಲರಾಗಿ ನೇಮಕ ಮಾಡಲಾಗುತ್ತಿರುವ ಹಿನ್ನೆಲೆಯಲ್ಲಿ, ಪ್ರಸ್ತುತ ಜೇಷ್ಠತೆಯಲ್ಲಿ ಹಿರಿಯರಾದ ಡಾ. ಸಿರಾಜ್ ಅಹಮದ್, ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇವರನ್ನು ಸಹ್ಯಾದ್ರಿ ಕಲಾ ಕಾಲೇಜಿಗೆ ಪ್ರಭಾರ ಪ್ರಾಂಶುಪಾಲರಾಗಿ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ದಿನಾಂಕ:01–08–2025 ರಿಂದ ಅನ್ವಯವಾಗುವಂತೆ ನೇಮಕ ಮಾಡಿ ಆದೇಶ ಹೊರಡಿಸಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025–ಸಿಂ–5.12:** ನಿಯೋಜನೆ ಮೇಲೆ ತೆರಳಲು ಅನುಮತಿ ನೀಡುವ ಕುರಿತು..

**ಚರ್ಚೆ:** ಕುಲಸಚಿವರು ಮಾತನಾಡಿ, ಡಾ.ಪೂರ್ಣಿಮಾ, ಡಿ. ಸಹಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ವಿಭಾಗ, ತುಮಕೂರು ವಿಶ್ವವಿದ್ಯಾಲಯ ಇವರು ವೈಯಕ್ತಿಕ ಕಾರಣಗಳಿಂದಾಗಿ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ನಿಯೋಜನೆ ಮೇಲೆ ಆಗಮಿಸಲು ಅನುಮತಿ ನೀಡುವಂತೆ ಮನವಿ ಸಲ್ಲಿಸಿದ್ದಾರೆ. ಅವರ ನಿಯೋಜನೆಗೆ ತುಮಕೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯು ತಾತ್ವಿಕವಾಗಿ ಅನುಮತಿಸಿರುವ ಮೇರೆಗೆ ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ. ಅನ್ಯ ವಿಶ್ವವಿದ್ಯಾಲಯದಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸಲು ಕೆ.ಸಿ.ಎಸ್.ಆರ್.ನಲ್ಲಿ ಮತ್ತು ಸರ್ಕಾರದ ಆದೇಶದ ಪ್ರಕಾರ ಅವಕಾಶ ಕಲ್ಪಿಸಲಾಗಿದೆ. ಆದುದರಿಂದ ಅವರಿಗೆ ನಿರಾಕ್ಷೇಪಣಾ ಪತ್ರ ನೀಡುವ ಕುರಿತಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಹುದ್ದೆ ಸಹಿತವಾಗಿ ವರ್ಗಾವಣೆ ಬಯಸಿ ಬರುವವರಿಗೆ ಮಾತ್ರ ಅನುಮತಿಸಬಹುದಾಗಿದ್ದು, ಉಳಿದವರಿಗೆ ಅನುಮತಿ ನೀಡಲು ಆಗುವುದಿಲ್ಲ ಎಂದರು. ಬಹಳಷ್ಟು ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ನಿರ್ಣಯ: ಚರ್ಚೆಯ ನಂತರ ಡಾ.ಪೂರ್ಣಿಮಾ ಡಿ., ಸಹಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ವಿಭಾಗ, ತುಮಕೂರು ವಿಶ್ವವಿದ್ಯಾಲಯ ಇವರಿಗೆ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ನಿಯೋಜನೆ ಮೇಲೆ ಆಗಮಿಸಲು ಅನುಮತಿ ನೀಡದಿರಲು ಸಭೆಯು ನಿರ್ಣಯಿಸಿತು.

**2025–ಸಿಂ–5.13:** ಡಾ. ಪ್ರಶಾಂತ್ ಎಸ್.ಜೆ., ಪ್ರಾಧ್ಯಾಪಕರು ಇವರ ಕರ್ತವ್ಯದ ವರದಿಯನ್ನು ಅಂಗೀಕರಿಸಿ ಸ್ಥಳ ನಿಯುಕ್ತಿ ಮಾಡಿರುವ ಕುರಿತು.

ನಿರ್ಣಯ: ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಆಹಾರ ಸಂಸ್ಕರಣೆ ಮತ್ತು ಪೋಷಣೆ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ಪ್ರಶಾಂತ್, ಎಸ್.ಜೆ., ಇವರು ಸರ್ಕಾರದ ಆದೇಶದ ಪ್ರಕಾರ ವರ್ಗಾವಣೆಗೊಂಡು ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗದ ಕರ್ತವ್ಯಕ್ಕೆ ಹಾಜರಾದ ವರದಿಯನ್ನು ಅಂಗೀಕರಿಸಿ ಸ್ಥಳ ನಿಯುಕ್ತಿ ಮಾಡಿರುವ ಕ್ರಮವನ್ನು ಸಭೆಯು ಗಮನಿಸಿತು.

**2025–ಸಿಂ–5.14:** ಪ್ರೊ. ಶಿವಾನಂದ ಕೆಳಗಿನಮನಿ, ಹಿರಿಯ ಪ್ರಾಧ್ಯಾಪಕರು, ಕನ್ನಡ ಭಾರತಿ– ಇವರನ್ನು ಹಿರಿಯ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ: ಪ್ರೊ. ಶಿವಾನಂದ ಕೆಳಗಿನಮನಿ, ಹಿರಿಯ ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ ಇವರು ಮಾನ್ಯ ಕುಲಾಧಿಪತಿಯವರಿಂದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ, ಅವರನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ವಿಶ್ವವಿದ್ಯಾಲಯದ ಕನ್ನಡ ಭಾರತಿ ವಿಭಾಗದ ಹಿರಿಯ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು ಹಾಗೂ ಸಿಂಡಿಕೇಟ್ ಸಭೆಯು ಅವರನ್ನು ಅಭಿನಂದಿಸಿತು.

**2025–ಸಿಂ–5.15:** ಕು: ಅನುಷಾ ಎಸ್.ಕೆ. U.U.C.M.S Portal Admin ಇವರ ವೇತನವನ್ನು ಪರಿಷ್ಕರಿಸುವ ಕುರಿತು.

ಚರ್ಚೆ: ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ U.U.C.M.S Portal Admin ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಕು: ಅನುಷಾ ಎಸ್.ಕೆ, ರವರು ಯು.ಯು.ಸಿ.ಎಂ.ಎಸ್. ನಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ಬಿ.ಇಡಿ ಪದವಿಗಳ ಶೈಕ್ಷಣಿಕ, ಪ್ರವೇಶಾತಿ, ಪರೀಕ್ಷೆ ಹಾಗೂ ಫಲಿತಾಂಶಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಕಾರ್ಯಭಾರವನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ರೂ.26,000–00ಗಳ ಮಾಸಿಕ ಸಂಭಾವನೆಯನ್ನು ಪಾವತಿಸಲಾಗುತ್ತಿದೆ. ಆದರೆ ಕು: ಅನುಷಾ ಎಸ್.ಕೆ. ಇವರು ತಮ್ಮ ಕಾರ್ಯಭಾರ ಮತ್ತು ಕಾರ್ಯಕ್ಷಮತೆಯನ್ನು ಪರಿಗಣಿಸಿ ತಮ್ಮ ವೇತನವನ್ನು ಹೆಚ್ಚಿಸುವಂತೆ ಕೋರಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಸಿಂಡಿಕೇಟ್ ನಿರ್ಣಯ ಕಾಯ್ದಿರಿಸಿ ಸದರಿಯವರಿಗೆ ಪ್ರಸ್ತುತ ಪಡೆಯುತ್ತಿರುವ ಮಾಸಿಕ ವೇತನವನ್ನು ರೂ.26,000/–ಗಳಿಂದ ರೂ.32,000/–ಗಳಿಗೆ ಪರಿಷ್ಕರಿಸಿ ಆಗಸ್ಟ್–2025 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಿರುವ ಕ್ರಮವನ್ನು ಸಭೆಯ ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

ಡಾ.ಜಿ. ಮಧುರವರು ಮಾತನಾಡಿ, ಕಾಲೇಜುಗಳಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ವಿಶ್ವವಿದ್ಯಾಲಯದ ಯು.ಯು.ಸಿ.ಎಂ.ಎಸ್. ವಿಭಾಗದವರು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಯು.ಯು.ಸಿ.ಎಂ.ಎಸ್. ನಲ್ಲಿ ಕೆಲಸದ ಒತ್ತಡ ಜಾಸ್ತಿ ಇದ್ದು, ಸಿಬ್ಬಂದಿಗಳ ಸಂಖ್ಯೆ ಬಹಳ ಕಡಿಮೆ ಇದೆ. ಇನ್ನೂ 04 ಜನರ ಅಗತ್ಯವಿದೆ ಎಂದರು. ಶ್ರೀ ಹೆಚ್.ಜಿ. ಅರವಿಂದ್‌ರವರು ಮಾತನಾಡಿ ಹೆಚ್ಚುವರಿ ಸಿಬ್ಬಂದಿ ಒದಗಿಸಿದಲ್ಲಿ ಯು.ಯು.ಸಿ.ಎಂ.ಎಸ್.ಗೆ ವಿದ್ಯಾರ್ಥಿಗಳು ಮತ್ತು ಕಾಲೇಜುಗಳಿಂದ ಬರುವ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಲು ಅನುಕೂಲವಾಗುತ್ತದೆ ಎಂದರು. ಡಾ.ಜಿ. ಮಧುರವರು ಮಾತನಾಡಿ,



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

Scanned with OKEN Scanner

ಹೆಚ್ಚುವರಿ ಸಿಬ್ಬಂದಿಗಳನ್ನು ಒದಗಿಸಿದಲ್ಲಿ ಪ್ರತಿಯೊಬ್ಬರಿಗೂ ಇಂತಿಷ್ಟು ಕಾಲೇಜುಗಳು ಎಂದು ಹಂಚಿಕೆ ಮಾಡಿದಲ್ಲಿ ಅವರು ನಿರ್ದಿಷ್ಟವಾಗಿ ತಮಗೆ ಸಂಬಂಧಪಟ್ಟ ಕಾಲೇಜುಗಳ ಬಗ್ಗೆ ಗಮನಹರಿಸುವುದರಿಂದ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಶೀಲಿಸಿ ಬಗೆಹರಿಸಲು ಸಾಧ್ಯವಾಗುತ್ತದೆ ಎಂದರು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವಿವಿಧ ರೀತಿಯ ಸಮಸ್ಯೆಗಳ ಬಗ್ಗೆ ವಿಶ್ವವಿದ್ಯಾಲಯಕ್ಕೆ ಬರುವಾಗ ಅವರ ಅರ್ಜಿಗಳ ಮೇಲೆ ಕಾಲೇಜಿನ ಪ್ರಾಂಶುಪಾಲರು ಸೂಕ್ತ ಶಿಫಾರಸ್ಸನ್ನು ವಿವರವಾಗಿ ಬರೆದು ವಿಶ್ವವಿದ್ಯಾಲಯಕ್ಕೆ ಕಳುಹಿಸಿದಲ್ಲಿ ಅನುಕೂಲವಾಗುತ್ತದೆ. ಕೆಲವು ಪ್ರಾಂಶುಪಾಲರು ಏನೂ ಶಿಫಾರಸ್ಸನ್ನು ಬರೆಯದೇ ಅರ್ಜಿಯ ಮೇಲೆ ಕೇವಲ ಸಹಿ ಮಾಡಿ ಸೀಲ್ ಕೂಡ ಹಾಕದೇ ಕಳುಹಿಸುತ್ತಾರೆ. ಇಂತಹ ಪ್ರಕರಣಗಳಲ್ಲಿ ಸದರಿ ಸಹಿ ಯಾರದು ಎಂದು ಗುರುತಿಸಲು ಆಗುವುದಿಲ್ಲ. ಆದುದರಿಂದ ಈ ಬಗ್ಗೆ ಕಾಲೇಜುಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದರು.

ಈ ಬಗ್ಗೆ ಸುತ್ತೋಲೆ ಹೊರಡಿಸುವ ಮೂಲಕ ಕ್ರಮವಹಿಸುವುದಾಗಿ ಕುಲಸಚಿವರು ತಿಳಿಸಿದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದಲ್ಲಿ U.U.C.M.S. Portal Admin ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಕು: ಅನುಷಾ ಎಸ್.ಕೆ, ರವರು . ಯು.ಯು.ಸಿ.ಎಂ.ಎಸ್.ನಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ಬಿ.ಇಡಿ ಪದವಿಗಳ ಶೈಕ್ಷಣಿಕ, ಪ್ರವೇಶಾತಿ, ಪರೀಕ್ಷೆ ಹಾಗೂ ಫಲಿತಾಂಶಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಕಾರ್ಯಭಾರ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಅವರ ಕಾರ್ಯಕ್ಷಮತೆಯನ್ನು ಪರಿಗಣಿಸಿ, ಸಿಂಡಿಕೇಟ್ ನಿರ್ಣಯ ಕಾಯ್ದಿರಿಸಿ, ಸದರಿಯವರಿಗೆ ಪ್ರಸ್ತುತ ಪಡೆಯುತ್ತಿರುವ ಮಾಸಿಕ ವೇತನವನ್ನು ರೂ.26,000/- ಗಳಿಂದ ರೂ.32,000/-ಗಳಿಗೆ ಪರಿಷ್ಕರಿಸಿ ಆಗಸ್ಟ್-2025 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅಮಮೋದಿಸಿ ಸ್ಥಿರೀಕರಿಸಿತು ಮತ್ತು ವಿದ್ಯಾರ್ಥಿಗಳು ಹಾಗೂ ಕಾಲೇಜುಗಳಿಗೆ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಯು.ಯು.ಸಿ.ಎಂ.ಎಸ್. ಅಡಿಯಲ್ಲಿ ತ್ವರಿತ ಸೇವೆ ಒದಗಿಸುವ ಹಿನ್ನೆಲೆಯಲ್ಲಿ 04 ಅರ್ಹ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.

ಮುಂದುವರೆದು, ವಿದ್ಯಾರ್ಥಿಗಳು ತಮ್ಮ ವಿವಿಧ ರೀತಿಯ ಸಮಸ್ಯೆಗಳ ಬಗ್ಗೆ ವಿಶ್ವವಿದ್ಯಾಲಯಕ್ಕೆ ಬರುವಾಗ ಅವರ ಅರ್ಜಿಗಳ ಮೇಲೆ ಕಾಲೇಜಿನ ಪ್ರಾಂಶುಪಾಲರು/ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಸೂಕ್ತ ಶಿಫಾರಸ್ಸನ್ನು ವಿವರವಾಗಿ ಮತ್ತು ಸ್ಪಷ್ಟವಾಗಿ ಬರೆದು ವಿದ್ಯಾರ್ಥಿಗಳ ಮನವಿಯನ್ನು ಪ್ರತ್ಯೇಕವಾದ ಪತ್ರದೊಂದಿಗೆ ಸಹಿ ಹಾಗೂ ಸೀಲ್ ಹಾಕಿ ವಿಶ್ವವಿದ್ಯಾಲಯದ ಸಂಬಂಧಪಟ್ಟ ವಿಭಾಗಕ್ಕೆ ಕಳುಹಿಸುವಂತೆ ಸೂಕ್ತ ನಿರ್ದೇಶನವನ್ನು ಸುತ್ತೋಲೆ ಹೊರಡಿಸುವ ಮೂಲಕ ನೀಡಬೇಕೆಂದು ಸಭೆಯು ನಿರ್ಣಯಿಸಿತು.

2025-ಸಿಂ-5.15(ಎ): ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸುವ ಕುರಿತು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಕ್ಷರ ಎರಡು ವರ್ಷಗಳ ಅವಧಿ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ಹೊಸ ಅಧ್ಯಕ್ಷರನ್ನು ನೇಮಕ ಮಾಡಬೇಕಾಗಿದೆ. ಕೆಲವು ವಿಭಾಗಗಳಲ್ಲಿ ಒಬ್ಬರೇ ಖಾಯಂ ಅಧ್ಯಾಪಕರು ಇರುವ ಪ್ರಕರಣಗಳಲ್ಲಿ, ಪ್ರಸ್ತುತ ಇರುವ ವಿಭಾಗಾಧ್ಯಕ್ಷರನ್ನೇ ಮರು ನೇಮಕ ಮಾಡಬೇಕಾಗಿದೆ. ಕೆಲ ವಿಭಾಗಗಳಲ್ಲಿ ಯಾವುದೇ ಖಾಯಂ ಅಧ್ಯಾಪಕರು ಇಲ್ಲವಾದ್ದರಿಂದ ಬೇರೆ ವಿಭಾಗಗಳ ಅಧ್ಯಾಪಕರನ್ನು ಅಧ್ಯಕ್ಷರಾಗಿ ನೇಮಕ ಮಾಡಬೇಕಾಗಿದ್ದು, ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ ಎಂದರು. ಕುಲಸಚಿವ(ಮೌಲ್ಯಮಾಪನ) ರವರು ಮಾತನಾಡಿ ಖಾಯಂ ಅಧ್ಯಾಪಕರು ಇಲ್ಲದ ವಿಭಾಗಗಳಿಗೆ ಬೇರೆ ಅಧ್ಯಯನ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರನ್ನು ಮುಖ್ಯಸ್ಥರನ್ನಾಗಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ನೇಮಕ ಮಾಡುವ ಪ್ರಕರಣಗಳಲ್ಲಿ ಅವರನ್ನು ವಿಭಾಗದ ಅಧ್ಯಕ್ಷರು ಎಂದು ನೇಮಕ ಮಾಡುವಂತಿಲ್ಲ. ಬದಲಾಗಿ ಸಂಯೋಜನಾಧಿಕಾರಿ ಎಂದು ಪದನಾಮ ನೀಡಬೇಕು ಎಂದರು. ಕುಲಸಚಿವರು ಮಾತನಾಡಿ ಯಾವುದೇ ವಿಭಾಗಕ್ಕೆ ಪ್ರಾಧ್ಯಾಪಕರನ್ನು ಮುಖ್ಯಸ್ಥರನ್ನಾಗಿ ನೇಮಕ ಮಾಡಿದಾಗ ಅವರು ಅಧ್ಯಕ್ಷರು ಎಂದು ಇದ್ದರೇನೆ ಸರಿ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಬೇರೆ ವಿಭಾಗಕ್ಕೆ ನೇಮಕ ಮಾಡುವ ಮುಖ್ಯಸ್ಥರನ್ನು ಸಂಯೋಜನಾಧಿಕಾರಿ ಎನ್ನುವುದು ಸರಿಯಾದುದು ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿ ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ನೂತನ ವಿಭಾಗಾಧ್ಯಕ್ಷರ ನೇಮಕ ಮಾಡಲು ಸರ್ವಾನುಮತದಿಂದ ಅನುಮೋದಿಸಲಾಯಿತು.

| ಕ್ರ. ಸಂ. | ಹೆಸರು | ಹುದ್ದೆ | ವಿಭಾಗ |
|---|---|---|---|
| 01 | ಡಾ. ದತ್ತಾತ್ರೇಯ, ಎಂ. | ಸಹ ಪ್ರಾಧ್ಯಾಪಕರು | ಇಂಗ್ಲಿಷ್ |
| 02 | ಡಾ. ನಮ್ರತಾ, ಎಂ. | ಪ್ರಾಧ್ಯಾಪಕರು | ಹಿಂದಿ * |
| | *ಹಿಂದಿ ವಿಭಾಗದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ದತ್ತಾತ್ರೇಯ, ಎಂ.,ರವರು ಇಂಗ್ಲಿಷ್ ವಿಭಾಗದ ಅಧ್ಯಕ್ಷರಾಗಿ ನೇಮಕವಾಗುತ್ತಿರುವುದರಿಂದ | | |
| 03 | ಡಾ.ಎಂ.ಆರ್.ಸತ್ಯಪ್ರಕಾಶ್ | ಪ್ರಾಧ್ಯಾಪಕರು | ಅರ್ಥಶಾಸ್ತ್ರ * |
| | * ಪ್ರೊ.ಎಸ್.ಎನ್. ಯೋಗೀಶ್‌ರವರ ವಯೋನಿವೃತ್ತಿಯ ನಂತರ ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಯಾರೂ ಖಾಯಂ ಅಧ್ಯಾಪಕರು ಇಲ್ಲದಿರುವುದರಿಂದ. | | |
| 04 | ಡಾ.ಜಿ.ಜೆ. ಸತೀಶ್ | ಪ್ರಾಧ್ಯಾಪಕರು | ಜೀವರಸಾಯನಶಾಸ್ತ್ರ |
| 05 | ಡಾ.ರಾಜಾನಾಯಕ | ಹಿರಿಯ ಪ್ರಾಧ್ಯಾಪಕರು | ಸಸ್ಯಶಾಸ್ತ್ರ |
| 06 | ಡಾ.ಎನ್.ಬಿ.ತಿಪ್ಪೇಸ್ವಾಮಿ | ಪ್ರಾಧ್ಯಾಪಕರು | ಸೂಕ್ಷ್ಮಾಣುಜೀವಶಾಸ್ತ್ರ |
| 07 | ಡಾ.ಗಜಾನನ ಪ್ರಭು | ಪ್ರಾಧ್ಯಾಪಕರು | ದೈಹಿಕ ಶಿಕ್ಷಣ |
| 08 | ಡಾ. ಪ್ರಶಾಂತ ಎಸ್.ಜೆ., | ಪ್ರಾಧ್ಯಾಪಕರು | ಆಹಾರ ತಂತ್ರಜ್ಞಾನ |

ಸ್ನಾತಕೋತ್ತರ ಕೇಂದ್ರ ಚಿಕ್ಕಮಗಳೂರಿನ ನಿರ್ದೇಶಕರಾಗಿ ಪ್ರೊ.ಕೆ.ಎಂ. ಮಹಾದೇವನ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ ಕಡೂರು ಇವರನ್ನು ನೇಮಕ ಮಾಡಲು ನಿರ್ಣಯಿಸಿದ ಸಭೆಯು ಖಾಯಂ ಅಧ್ಯಾಪಕರು ಇಲ್ಲದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಬೇರೆ ವಿಭಾಗದ ಅಧ್ಯಾಪಕರನ್ನು ಅಧ್ಯಕ್ಷರು ಎಂಬುದರ ಬದಲಾಗಿ ಸಂಯೋಜನಾಧಿಕಾರಿ ಎಂದು ನೇಮಕ ಮಾಡಲು ನಿರ್ಣಯಿಸಿತು.

**2025–ಶಿಂ–5.15(ಬಿ):** ಸ್ನಾತಕೋತ್ತರ ಉರ್ದು ಅಧ್ಯಯನ ವಿಭಾಗಕ್ಕೆ ವಿಭಾಗಾಧ್ಯಕ್ಷರನ್ನು ನೇಮಕ ಮಾಡುವ ಕುರಿತು.

**ನಿರ್ಣಯ:** ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿರುವ ವಿಶ್ವವಿದ್ಯಾಲಯದ ಸ್ನಾತಕೋತ್ತರ ಉರ್ದು ಅಧ್ಯಯನ ವಿಭಾಗದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಸೈಯದ್ ಸನಾವುಲ್ಲರವರು ದಿನಾಂಕ:31–07–2025 ರಂದು ವಯೋನಿವೃತ್ತಿ ಹೊಂದಿರುವ ಹಿನ್ನೆಲೆಯಲ್ಲಿ ಡಾ.ಸಿರಾಜ್ ಅಹಮದ್, ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ ಮತ್ತು ಪ್ರಾಂಶುಪಾಲರು (ಪ್ರಭಾರ), ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇವರನ್ನು ಸ್ನಾತಕೋತ್ತರ ಉರ್ದು ವಿಭಾಗದ ಸಂಯೋಜನಾಧಿಕಾರಿಯಾಗಿ ನೇಮಕ ಮಾಡಲು ಸಭೆಯು ನಿರ್ಣಯಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

2025–ಸಿಂ–5.15(ಸಿ): ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರ ನೇಮಕಾತಿ ಕುರಿತು.

ನಿರ್ಣಯ: ಘನತೆವೆತ್ತ ಕುಲಾಧಿಪತಿಗಳು ಹಾಗೂ ರಾಜ್ಯಪಾಲರ ಕಛೇರಿಯ ಅಧಿಸೂಚನೆ ದಿನಾಂಕ:28-04-2022ರ ಮೇರೆಗೆ ಮೂರು ವರ್ಷಗಳ ಅವಧಿಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರಾಗಿ ನೇಮಕಗೊಂಡಿದ್ದ ಡಾ. ಜಿ.ಪ್ರಶಾಂತ್ ನಾಯಕ, ಹಿರಿಯ ಪ್ರಾಧ್ಯಾಪಕರು, ಕನ್ನಡಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಇವರ ಅವಧಿಯು ದಿನಾಂಕ:31-05-2025 ರಂದು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಪ್ರಕರಣ 22ರನ್ವಯ ಮತ್ತು ಕುವೆಂಪು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರ ನೇಮಕಾತಿ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಯಂತ್ರಿಸುವ ಅಧಿನಿಯಮದ ಕಂಡಿಕೆ 02(1)ರಲ್ಲಿ The Syndicate shall submit a panel of three persons of the rank of University Professor to the Chancellor to select one and appoint him as a Director, Students Welfare for a period of not exceeding three years at a time ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರ ಹುದ್ದೆಗೆ ಮೂವರು ಪ್ರಾಧ್ಯಾಪಕರುಗಳ ಹೆಸರನ್ನು ಘನತೆವೆತ್ತ ಕುಲಾಧಿಪತಿಗಳಿಗೆ ಶಿಫಾರಸ್ಸು ಮಾಡಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

2025–ಸಿಂ–5.15(ಡಿ): ಡಾ. ಕೆ.ಆರ್. ಮಂಜುನಾಥ್. ಪ್ರಾಧ್ಯಾಪಕರು – ಇವರಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

ನಿರ್ಣಯ: ಡಾ. ಕೆ.ಆರ್. ಮಂಜುನಾಥ ಪ್ರಾಧ್ಯಾಪಕರು, ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರು Investment Management and Corporate Communication ಎಂಬ ವಿಷಯದ ಕುರಿತು ಗ್ರಂಥವನ್ನು ಹೊರತರಲು ಉದ್ದೇಶಿಸಿರುವುದರಿಂದ ದಿನಾಂಕ: 01-04-2026 ರಿಂದ 31-03-2027ರವರೆಗೆ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವಂತೆ ಕೋರಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು, ವಿಶ್ವವಿದ್ಯಾಲಯದ ಸಬ್ಬಾಟಿಕಲ್ ರಜೆಯ ಪರಿನಿಯಮಗಳನ್ವಯ ಅವರು ಅರ್ಹತೆ ಹೊಂದಿರುವುದನ್ನು ಪರಿಗಣಿಸಿ, ಅವರಿಗೆ ಒಂದು ವರ್ಷದ ಸಬ್ಬಾಟಿಕಲ್‌ರಜೆಯನ್ನು ಮಂಜೂರು ಮಾಡಲು ಅನುಮತಿಸಿತು ಮತ್ತು ಅವರು ಸಬ್ಬಾಟಿಕಲ್ ರಜೆಯನ್ನು ಮುಗಿಸಿಕೊಂಡು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ರಜಾ ಅವಧಿಯಲ್ಲಿ ಸಿದ್ಧಪಡಿಸಿ ಹೊರತಂದ ಗ್ರಂಥದ ಒಂದು ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಹಾಜರುಪಡಿಸಬೇಕೆಂದು ತಿಳಿಸಲು ನಿರ್ಣಯಿಸಿತು.

2025–ಸಿಂ–5.15(ಇ): ಗೃಹಪರಿಚಾರಕ ಭತ್ಯೆಯನ್ನು ಪರಿಷ್ಕರಿಸುವ ಬಗ್ಗೆ

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಿಗೆ ಗೃಹಪರಿಚಾರಕ ಭತ್ಯೆಗಳನ್ನು ಪಾವತಿಸುತ್ತಿದ್ದು, ದಿನಾಂಕ:16-03-2022ರ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ನಡಾವಳಿ ಆದೇಶದಲ್ಲಿ ಗೃಹ ಪರಿಚಾರಕ ಭತ್ಯೆಯ ದರಗಳನ್ನು ಪರಿಷ್ಕರಿಸಿ ಹೆಚ್ಚಿಸಿರುವುದನ್ನು ಪರಿಗಣಿಸಿ, ವಿಶ್ವವಿದ್ಯಾಲಯದಲ್ಲಿ ಕೂಡ ಮಾನ್ಯ ಕುಲಪತಿಯವರಿಗೆ ಶೇ.80 ರಷ್ಟು ಹಾಗೂ ಕುಲಸಚಿವರು (ಆಡಳಿತ), ಕುಲಸಚಿವರು (ಮೌಲ್ಯಮಾಪನ) ಮತ್ತು ಹಣಕಾಸು ಅಧಿಕಾರಿಗಳಿಗೆ ಶೇ.70ರಷ್ಟು ಪರಿಷ್ಕರಿಸಿ ಹೆಚ್ಚಿಸಲು ಸಭೆಯು ಅನುಮೋದಿಸಿತು.

2025–ಸಿಂ–5.15(ಎಫ್): ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಇವರುಗಳ ಮನವಿಯ ಕುರಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಏಜೆನ್ಸಿ ಸಿಬ್ಬಂದಿಗಳಾದ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್‌ಗಳು ಬಹಳ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಅವರ ಸೇವೆಯನ್ನು ತುರ್ತು ಸೇವೆ ಎಂದು ಪರಿಗಣಿಸಿ ವೈದ್ಯರಿಗೆ ಕೊಡುವ ಹಾಗೆ ಸಂಚಿತ ವೇತನ ಅಥವಾ ಹಾಸನ ವೈದ್ಯಕೀಯ, ವಿಜ್ಞಾನಗಳ ಸಂಸ್ಥೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ರೂ.35,000/- ಗಳ ವೇತನವನ್ನು ನೀಡುತ್ತಿದ್ದು, ಅದರಂತೆ ತಮಗೂ ಪರಿಷ್ಕೃತ ವೇತನವನ್ನು ನೀಡುವಂತೆ ಕೋರಿರುವ ಹಿನ್ನಲೆಯಲ್ಲಿ ದಿನಾಂಕ: ದಿನಾಂಕ:07-03-2025 ಮತ್ತು 24-03-2025ರಂದು ನಡೆದ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯ ನಿರ್ಣಯದಲ್ಲಿ ಆರೋಗ್ಯ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್‌ಗಳಿಗೆ ಗೌರವ ಸಂಭಾವನೆ ಪಾವತಿಸುವ ಕುರಿತಾಗಿ ರಾಜ್ಯದ ಬೇರೆ ವಿಶ್ವವಿದ್ಯಾಲಯ, ಇಲಾಖೆ ಹಾಗೂ ಸಂಸ್ಥೆಗಳಲ್ಲಿ ಆರೋಗ್ಯ ಕೇಂದ್ರದ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ವೇತನದ ಕುರಿತಾಗಿ ಮಾಹಿತಿ ಪಡೆದು, ಮಾಹಿತಿಗಳು ಬಂದ ನಂತರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವುದು ಎಂದು ನಿರ್ಣಯವಾಗಿತ್ತು. ಈ ಮೇರೆಗೆ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಪತ್ರ ಬರೆದು ತಮ್ಮ ಸಂಸ್ಥೆಯ ಆರೋಗ್ಯ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ರವರುಗಳಿಗೆ ಗೌರವ ಸಂಭಾವನೆ ಪಾವತಿಸುವ ಕುರಿತು ಪಾಲಿಸುತ್ತಿರುವ ಮಾನದಂಡಗಳು ಮತ್ತು ಮಾಹಿತಿಯನ್ನು ಮರು ಟಪಾಲಿನಲ್ಲಿ ಒದಗಿಸುವಂತೆ ಕೋರಲಾಗಿತ್ತು. ಆದರೆ, ಇದಕ್ಕೆ ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ ಎಂದರು.

ಮುಂದುವರೆದು ಮಾತನಾಡಿದ ಅವರು, ವಿಶ್ವವಿದ್ಯಾಲಯವು ಪ್ರಸ್ತುತ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ/ಪಡಿಸುವ ದರಗಳನ್ವಯ ಹೊರಗುತ್ತಿಗೆ ಮೂಲಕ ಮಾನವ ಸೇವೆಯನ್ನು ಪಡೆಯಲು ಇ-ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿರುತ್ತದೆ. ದಿನಾಂಕ:11-04-2025 ರಂದು ಕಾರ್ಮಿಕ ಇಲಾಖೆಯು ಹೊರಡಿಸಿರುವ ಅಧಿಸೂಚನೆಯಲ್ಲಿ ನರ್ಸ್ (ಸ್ಟಾಫ್ ನರ್ಸ್)/ಫಾರ್ಮಾಸಿಸ್ಟ್ ಮತ್ತು ಲ್ಯಾಬ್ ಟೆಕ್ನೀಷಿಯನ್ ರವರುಗಳಿಗೆ ಮಾಸಿಕ ರೂ.25,714.07ಗಳಂತೆ ಕನಿಷ್ಠ ದರಗಳನ್ನು ನಿಗದಿಪಡಿಸಿ, ಎರಡು ತಿಂಗಳ ಅವಧಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಿರುತ್ತದೆ. ಅದರಂತೆ ಈಗಾಗಲೇ ಎರಡು ತಿಂಗಳ ಕಾಲಾವಧಿ ಮುಕ್ತಾಯಗೊಂಡಿದ್ದು, ಅಂತಿಮ ಅಧಿಸೂಚನೆ ಸ್ವೀಕೃತಗೊಂಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಆರೋಗ್ಯ ಕೇಂದ್ರದ ಸಿಬ್ಬಂದಿಗಳಿಗೆ ವೇತನ ನಿಗದಿಪಡಿಸುವ ಕುರಿತಂತೆ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ ಎಂದರು.

ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ ನಿಗದಿತ ಅವಧಿಗಿಂತ ಹೆಚ್ಚಿನ ಕೆಲಸ ಮಾಡಿದವರಿಗೆ ಹೆಚ್ಚುವರಿ ವೇತನ ನೀಡಬಹುದು ಎಂದರು. ಕುಲಸಚಿವರು ಮಾತನಾಡಿ, ನಿಗದಿತ ಅವಧಿ 8 ಗಂಟೆಗಳಿಗಿಂತ ಹೆಚ್ಚುವರಿಯಾಗಿ ಕರ್ತವ್ಯ ನಿರ್ವಹಿಸುವವರಿಗೆ ಹೆಚ್ಚುವರಿ ವೇತನ ಪಾವತಿಸಬೇಕೆಂದು ಕಾರ್ಮಿಕ ಇಲಾಖೆಯ ಆದೇಶ ಇದೆ ಎಂದರು, ಈ ಕುರಿತಾಗಿ ಸಹಾನುಭೂತಿಯಿಂದ ಪರಿಶೀಲಿಸುವಂತೆ ಎಲ್ಲಾ ಸದಸ್ಯರು ಕೋರಿದರು.

**ನಿರ್ಣಯ:** ಚರ್ಚೆಯ ನಂತರ, ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಪರಿಷ್ಕೃತ ವೇತನವನ್ನು ವಿಶ್ವವಿದ್ಯಾಲಯದ ಆರೋಗ್ಯಕೇಂದ್ರದ ಸಿಬ್ಬಂದಿಗಳಿಗೆ ವಿಸ್ತರಿಸಬೇಕು ಹಾಗೂ ನಿಗದಿತ 8 ಗಂಟೆಗಳಿಗಿಂತ ಹೆಚ್ಚುವರಿ ಅವಧಿಗೆ ಕೆಲಸ ನಿರ್ವಹಿಸಿದಲ್ಲಿ ಅವರಿಗೆ ಕಾರ್ಮಿಕ ಇಲಾಖೆಯ ಆದೇಶದ ಪ್ರಕಾರ ಹೆಚ್ಚುವರಿ ವೇತನ ಪಾವತಿಸಬೇಕೆಂದು ನಿರ್ಣಯಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

## ದಾಸ್ತಾನು ಮತ್ತು ಖರೀದಿ ವಿಭಾಗ

**2025–ಸಿಂ–5.16:** ವಿಶ್ವವಿದ್ಯಾಲಯದ ವಿವಿಧ ವಿಭಾಗ/ ಕಛೇರಿಗಳ ಯು.ಪಿ.ಎಸ್. ಸಿಸ್ಟಂ ಮತ್ತು ಬ್ಯಾಟರಿಗಳ ವಾರ್ಷಿಕ ನಿರ್ವಹಣೆ ದರ ಒಪ್ಪಂದವ (AMC) ಮುಂದುವರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ವಿವಿಧ ಆಡಳಿತ ಕಛೇರಿಗಳು, ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ ಹಾಗೂ ಘಟಕ ಕಾಲೇಜುಗಳಿಗೆ ಒದಗಿಸಿರುವ ಯು.ಪಿ.ಎಸ್. ಸಿಸ್ಟಂ ಹಾಗು ಬ್ಯಾಟರಿಗಳನ್ನು ನಿರ್ವಹಣೆ ಮಾಡಲು ಇ–ಟೆಂಡರ್ ಮೂಲಕ ಆಯ್ಕೆಗೊಂಡು ಸೇವೆ ಒದಗಿಸುತ್ತಿದ್ದ ಮೆ:ಗ್ಲೋಬಲ್ ಟೆಕ್ನಿಕಲ್ ಸಲ್ಯೂಷನ್ಸ್, ಶಿವಮೊಗ್ಗ ಇವರ ವಾರ್ಷಿಕ ನಿರ್ವಹಣೆಯ ಅವಧಿಯು ದಿನಾಂಕ:25–03–2025 ರಂದು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ತಕ್ಷಣವೇ ತುರ್ತಾಗಿ ಇ–ಟೆಂಡರ್ ಪ್ರಕ್ರಿಯೆ ಆರಂಭಿಸಬೇಕು. ಮೆ:ಗ್ಲೋಬಲ್ ಟೆಕ್ನಿಕಲ್ ಸಲ್ಯೂಷನ್ಸ್, ಶಿವಮೊಗ್ಗ ಇವರ ವಾರ್ಷಿಕ ನಿರ್ವಹಣೆಯ ಸೇವೆಯನ್ನು ದಿನಾಂಕ:25–09–2025ಕ್ಕೆ ಮುಕ್ತಾಯಗೊಳಿಸುವುದು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2025–ಸಿಂ–5.17:** 2025–26ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಪದವಿ ಕಾಲೇಜು ಪ್ರಾರಂಭಿಸಲು ಸಂಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ದಿನಾಂಕ:15–05–2025ರ ಪತ್ರ ಮತ್ತು ದಿನಾಂಕ:20–05–2025ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ ಎ.ವಿ.ಎಸ್. ಎಜುಕೇಷನ್ ಸಂಸ್ಥೆಯವರು ಚಿಕ್ಕಮಗಳೂರಿನಲ್ಲಿ ಇನ್ಫಿನಿಟಿ ಅಜೇಶ್ ಸಂಹಿತ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜನ್ನು ಬಿ.ಕಾಂ., ಬಿ.ಸಿ.ಎ., ಬಿ.ಎಸ್ಸಿ. ಮತ್ತು ಬಿ.ಬಿ.ಎ. ಕೋರ್ಸ್‌ಗಳೊಂದಿಗೆ ಹೊಸದಾಗಿ ಆರಂಭಿಸಲು ತಪಾಸಣೆಗಾಗಿ ಹೋಗಿಬಂದ ಸ್ಥಳೀಯ ತಪಾಸಣಾ ಸಮಿತಿಯು ಸಲ್ಲಿಸಿದ್ದ ವರದಿಯನ್ನು ಕಾಲಾವಕಾಶ ಕಡಿಮೆ ಇದ್ದುದ್ದರಿಂದ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸರ್ಕಾರಕ್ಕೆ ಕಳುಹಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025–ಸಿಂ–5.18:** 2025–26ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಲು ಸರ್ಕಾರದಿಂದ ಅನುಮತಿ ನೀಡಿರುವ ಹೊಸ ಕೋರ್ಸ್‌ಗಳಿಗೆ ಹೊಸದಾಗಿ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ಚಿಕ್ಕಮಗಳೂರಿನ ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನಲ್ಲಿ 2025–26ನೇ ಸಾಲಿನಲ್ಲಿ ಬಿ.ಎ., ಬಿ.ಎಸ್ಸಿ. ಮತ್ತು ಬಿ.ಕಾಂ. ಕೋರ್ಸ್‌ಗಳಿಗೆ ಹೊಸ ಕಾಂಬಿನೇಷನ್ ಪ್ರಾರಂಭಿಸಲು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ (ಕಾಲೇಜು ಶಿಕ್ಷಣ) ದಿನಾಂಕ:19–06–2025ರ ಪತ್ರದಲ್ಲಿ ಅನುಮತಿ ನೀಡಿದ್ದ ಹಿನ್ನೆಲೆಯಲ್ಲಿ ಮತ್ತು ಆ ವೇಳೆಗೆ 2025–26ನೇ ಸಾಲಿನ ಸಂಯೋಜನಾ ಪ್ರಕ್ರಿಯೆಗಳು ಮುಕ್ತಾಯಗೊಂಡಿದ್ದರಿಂದ ಸರ್ಕಾರ ಮಂಜೂರು ಮಾಡಿದ್ದ ಕೋರ್ಸ್‌ಗಳಿಗೆ ಹೊಸದಾಗಿ ಯು.ಯು.ಸಿ.ಎಂ.ಎಸ್. ನಲ್ಲಿ ಅರ್ಜಿ ಸಲ್ಲಿಸಲು ಅನುಮತಿ ಕೋರಿ ಸರ್ಕಾರಕ್ಕೆ ಪತ್ರ ಬರೆದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

**2025–ಸಿಂ–5.18(ಎ):** 2025–26ನೇ ಸಾಲಿಗೆ ಮುಂದುವರಿಕೆ/ಹೊಸ ಸಂಯೋಜನೆಗೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ತಾಂತ್ರಿಕ ಸಮಸ್ಯೆಯಿಂದಾಗಿ ಯು.ಯು.ಸಿ.ಎಂ.ಎಸ್. ಪೋರ್ಟಲ್ ಮೂಲಕ ಸಕಾಲದಲ್ಲಿ ಮರು ಸಂಯೋಜನೆಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದ ಎ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಮಗಳೂರು ಮತ್ತು ಚನ್ನಗಿರಿ ತಾಲ್ಲೂಕಿನ ಅಜ್ಜಿಹಳ್ಳಿಯಿಂದ ಶಿವಮೊಗ್ಗಕ್ಕೆ ಎನ್.ಸಿ.ಟಿ.ಇ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲೆ.

Scanned with OKEN Scanner

ಮಾನ್ಯತೆಯೊಂದಿಗೆ ವರ್ಗಾವಣೆಗೊಂಡ ಶ್ರೀ ಪಾರ್ಶ್ವನಾಥ ಶಿಕ್ಷಣ ಮಹಾವಿದ್ಯಾಲಯ, ಶಿವಮೊಗ್ಗ ಇಲ್ಲಿಗೆ ಭೇಟಿ ನೀಡಿದ್ದ ಸ್ಥಳೀಯ ತಪಾಸಣಾ ಸಮಿತಿಗಳು ಸಲ್ಲಿಸಿದ್ದ ವರದಿಗಳ ಅನ್ವಯ ಸಂಯೋಜನಾ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದನ್ನು ಪರಿಗಣಿಸಿ, ಸದರಿ ಕಾಲೇಜುಗಳಿಗೆ ಸಂಯೋಜನಾ ಆದೇಶವನ್ನು ನೀಡಲು ಸಭೆಯು ಅನುಮತಿಸಿತು.

## ಎಸ್ಟೇಟ್ ವಿಭಾಗ

**2025–ಸಿಂ–5.19:** ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ/ತೋಟಗಾರಿಕೆ/ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು M/s KSF-9 Corporate Service Pvt. Ltd., Bengaluru – ಇವರಿಂದ ಪಡೆಯುತ್ತಿರುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ/ತೋಟಗಾರಿಕೆ/ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಒದಗಿಸುವ ಇ–ಟೆಂಡರ್‌ನಲ್ಲಿ M/s KSF-9 Corporate Service Pvt. Ltd., Bengaluru ಇವರು ಅರ್ಹಗೊಂಡಿದ್ದು, ಸದರಿ ಇ–ಟೆಂಡರ್‌ನ್ನು ದಿನಾಂಕ:20–05–2025ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಿದಾಗ, ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ. ಇವರು ಮಾತನಾಡಿ, ಸದರಿ ಸಂಸ್ಥೆಯನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿರುವುದಾಗಿ ಮಾಹಿತಿ ಇದ್ದು, ಈ ಬಗ್ಗೆ ಪರಿಶೀಲಿಸುವಂತೆ ತಿಳಿಸಿದರು. ಈ ಬಗ್ಗೆ ಚರ್ಚಿಸಿದ ಸಭೆಯು ಸದರಿ ಸಂಸ್ಥೆಯನ್ನು ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು ಮತ್ತು ಸದರಿ ದಾಖಲೆಗಳನ್ನು ಪರಿಶೀಲಿಸಿ, ಬ್ಲಾಕ್‌ಲಿಸ್ಟ್‌ನಲ್ಲಿ ಇರುವುದು ದೃಢಪಟ್ಟಲ್ಲಿ, ಟೆಂಡರ್‌ನ್ನು ರದ್ದುಪಡಿಸಿ ಮರುಟೆಂಡರ್ ಕರೆಯಬೇಕು. ಮುಂದಿನ ತೀರ್ಮಾನ ಆಗುವವರೆಗೆ M/s KSF-9 Corporate Service Pvt. Ltd., Bengaluru ಸಂಸ್ಥೆಯವರು ಭದ್ರತಾ ಸಿಬ್ಬಂದಿ/ತೋಟಗಾರಿಕೆ/ ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವುದನ್ನು ಮುಂದುವರಿಸಲು ನಿರ್ಣಯಿಸಲಾಗಿರುತ್ತದೆ.

ಈ ಸಂಬಂಧ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಮತ್ತು ಆಕ್ಷೇಪಣೆ ವ್ಯಕ್ತಪಡಿಸಿದ್ದ ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರಿಗೆ ದಾಖಲಾತಿಗಳನ್ನು ಒದಗಿಸುವಂತೆ ಪತ್ರ ಬರೆಯಲಾಗಿತ್ತು. ಆದರೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದವರು ಹಾಗೂ ಶ್ರೀ ಮುಸಾವೀರ್ ಬಾಷಾರವರು ಸದರಿ ಸಂಸ್ಥೆಯನ್ನು ಬ್ಲಾಕ್‌ಲಿಸ್ಟ್‌ನಲ್ಲಿ ಇಟ್ಟಿರುವ ಬಗ್ಗೆ ಈವರೆಗೂ ಯಾವುದೇ ದಾಖಲಾತಿಯನ್ನು ಒದಗಿಸಿಲ್ಲವಾದ್ದರಿಂದ ಈ ಬಗ್ಗೆ ನಿರ್ಣಯಕ್ಕಾಗಿ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ.ರವರು ಮಾತನಾಡಿ, ಸದರಿ ಸಂಸ್ಥೆಯವರು ಸಕಾಲದಲ್ಲಿ ವೇತನ ಪಾವತಿಸುತ್ತಿಲ್ಲವೆಂಬ ದೂರುಗಳಿದ್ದವು, ಆದುದರಿಂದ ಆಕ್ಷೇಪಿಸಿದ್ದೆ. ಆದರೆ, ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿರುವ ಬಗ್ಗೆ ದಾಖಲೆಗಳು ಲಭ್ಯವಾಗಿಲ್ಲ. ಆದುದರಿಂದ ಅವರಿಗೆ ಆದೇಶ ನೀಡಬಹುದು ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ಬ್ಲಾಕ್‌ಲಿಸ್ಟ್‌ನಲ್ಲಿ ಇರುವುದರ ಬಗ್ಗೆ ಮುಂದೆ ದಾಖಲಾತಿಗಳು ದೊರೆತಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರು ಮತ್ತು ಶ್ರೀ ಬಿ.ಎನ್. ಶಶಿಧರ್‌ರವರು ಕೂಡ ಧ್ವನಿಗೂಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಭದ್ರತಾ/ತೋಟಗಾರಿಕೆ/ ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಒದಗಿಸುವ ಇ–ಟೆಂಡರ್‌ನಲ್ಲಿ ಅರ್ಹಗೊಂಡಿರುವ M/s KSF-9 Corporate Service Pvt. Ltd., Bengaluru ಇವರಿಗೆ ಸೇವಾ ಸರಬರಾಜು ಆದೇಶ ನೀಡಲು ಸರ್ವಾನುಮತದಿಂದ ಅನುಮೋದನೆ ನೀಡಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

## ಅಭಿವೃದ್ಧಿ ವಿಭಾಗ

**2025–ಸಿಂ–5.20:** ಪ್ರೊ. ಶರತ್ ಅನಂತಮೂರ್ತಿ, ಮಾನ್ಯ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಇವರು ದಕ್ಷಿಣ ಆಫ್ರಿಕಾದ ಬೋಟ್ಸ್‌ವಾನ (Botswana) ದಲ್ಲಿ ನಡೆಯಲಿರುವ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಸಿಂಡಿಕೇಟ್ ಅನುಮೋದನೆ ಪಡೆಯುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡಿ, ದಕ್ಷಿಣ ಆಫ್ರಿಕದ Gaborone International Convetion Centre, Botswana ದಲ್ಲಿ ದಿನಾಂಕ:10–09–2025 ರಿಂದ 12–09–2025ರವರೆಗೆ Eleventh Pan–Commonwealth Forum on Open Learning (PCF11) ಅಂತರ ರಾಷ್ಟ್ರೀಯ ಸಮ್ಮೇಳನ ನಡೆಯುತ್ತಿದ್ದು, ಈ ಸಮ್ಮೇಳನದಲ್ಲಿ ಜಾಗತಿಕ ಮಟ್ಟದ ದೂರಶಿಕ್ಷಣ (ODL-Open & Distance Learning) ಕ್ಷೇತ್ರದಲ್ಲಿ ಜ್ಞಾನ ವಿನಿಮಯ, ಜಾಗತಿಕ ಅವಶ್ಯಕತೆಗಳನ್ನು ಗುರುತಿಸುವಿಕೆ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಳ ಸೇತುಬಂಧ ಮತ್ತು ಶಿಕ್ಷಣದ ಕಲಿಕೆಯಲ್ಲಿ ಮಹತ್ತರ ಪಾತ್ರ ವಹಿಸಲಿದೆ. ಈ ಸಮ್ಮೇಳನದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಶರತ್ ಅನಂತಮೂರ್ತಿರವರು ಭಾಗವಹಿಸಿ ಲೇಖನವನ್ನು ಮಂಡಿಸಲು ಬೋಟ್ಸ್‌ವಾನ ಮುಕ್ತ ವಿಶ್ವವಿದ್ಯಾಲಯ (Botswana Open University) ಅನುಮೋದನೆ ನೀಡಿರುತ್ತದೆ. ವಿಶ್ವವಿದ್ಯಾಲಯದಲ್ಲಿ ಈಗಾಗಲೇ ನಡೆಸಲಾಗುತ್ತಿರುವ ODL(Open & Distance Learning) ಕೋರ್ಸ್‌ಗಳನ್ನು ಜಾಗತಿಕ ಮಟ್ಟಕ್ಕೆ ತರಲು ಈ ಅಂತರರಾಷ್ಟ್ರೀಯ ಸಮ್ಮೇಳನವು ಪೂರಕವಾಗಿದೆ. ಅಲ್ಲದೇ ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ನ್ಯಾಕ್ ಮೌಲ್ಯಾಂಕನದಲ್ಲಿ "ಎ" ಶ್ರೇಣಿ ಲಭಿಸಿದ್ದು, ಈ ಸಮ್ಮೇಳನದ ಫಲಿತಾಂಶವು ODL ಕಾರ್ಯಕ್ರಮದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಲಿದೆ. ಆದ್ದುದರಿಂದ, ಈ ಕಾರ್ಯಕ್ರಮದಲ್ಲಿ ಮಾನ್ಯ ಕುಲಪತಿಯವರು ಭಾಗವಹಿಸಲು ಅನುಮತಿಗಾಗಿ ಹಾಗೂ ಈ ಸಮ್ಮೇಳನಕ್ಕೆ ತಗಲುವ ನೋಂದಣಿ ಶುಲ್ಕ ರೂ. 35,620/– (ರೂಪಾಯಿ ಮೂವತ್ತೈದು ಸಾವಿರದ ಆರು ನೂರ ಇಪ್ಪತ್ತು ಮಾತ್ರ) ಮತ್ತು ಪ್ರಯಾಣ ಭತ್ಯೆ/ದಿನಭತ್ಯೆ ವಾಸ್ತವ್ಯ ಭತ್ಯೆ ಮತ್ತಿತರೆ ವೆಚ್ಚಗಳು ಸೇರಿದಂತೆ ಒಟ್ಟು ಅಂದಾಜು ರೂ. 2,50,000/– (ರೂಪಾಯಿ ಎರಡು ಲಕ್ಷದ ಐವತ್ತು ಸಾವಿರ ಮಾತ್ರ) ಗಳನ್ನು ಎ.ಸಿ. ಬಿಲ್ಲಿನಲ್ಲಿ ಮುಂಗಡ ಪಡೆಯಲು ಅನುಮತಿ ನೀಡುವ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣ ಕೋರ್ಸ್‌ಗಳನ್ನು ಪುನರ್ ಆರಂಭಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮದಲ್ಲಿ ಮಾನ್ಯ ಕುಲಪತಿಯವರು ಭಾಗವಹಿಸುವುದರಿಂದ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುತ್ತದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ದಕ್ಷಿಣ ಆಫ್ರಿಕದ Gaborone International Convetion Centre, Botswana ದಲ್ಲಿ ದಿನಾಂಕ:10–09–2025 ರಿಂದ 12–09–2025 ರವರೆಗೆ ನಡೆಯುವ Eleventh Pan–Commonwealth Forum on Open Learning (PCF11) ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾನ್ಯ ಕುಲಪತಿಯವರು ಭಾಗವಹಿಸಲು ಅನುಮತಿಸಿದ ಸಭೆಯು, ವಿಶ್ವವಿದ್ಯಾಲಯದಲ್ಲಿ ದಿನಾಂಕ: 07–09–2025 ರಿಂದ 15–09–2025ರ ವರೆಗಿನ ಕುಲಪತಿಗಳ ಅನುಪಸ್ಥಿತಿಯನ್ನು ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸಲು ಮತ್ತು ನೋಂದಣಿ ಶುಲ್ಕ ರೂ. 35,620/– (ರೂಪಾಯಿ ಮೂವತ್ತೈದು ಸಾವಿರದ ಆರು ನೂರ ಇಪ್ಪತ್ತು ಮಾತ್ರ) ಮತ್ತು ಪ್ರಯಾಣ ಭತ್ಯೆ/ದಿನಭತ್ಯೆ ವಾಸ್ತವ್ಯ ಭತ್ಯೆ ಮತ್ತಿತರೆ ವೆಚ್ಚಗಳು ಸೇರಿದಂತೆ ಒಟ್ಟು ಅಂದಾಜು ರೂ.2,50,000/–(ರೂಪಾಯಿ ಎರಡು ಲಕ್ಷದ ಐವತ್ತು ಸಾವಿರ ಮಾತ್ರ) ಗಳನ್ನು ಎ.ಸಿ. ಬಿಲ್ಲಿನಲ್ಲಿ ಮುಂಗಡ ಪಡೆಯಲು ಅನುಮತಿಸಿತು.

**2025–ಸಿಂ–5.21:** ಡಾ. ಶ್ರೀಶೈಲ ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ – ಇವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮೋದನೆ ನೀಡುವ ಕುರಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ನಿರ್ಣಯ: ಡಾ. ಶ್ರೀಶೈಲ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗ – ಇವರು ದಿನಾಂಕ:27-04-2026 ರಿಂದ 29-04-2026ರವರೆಗೆ Wisdom Conferences ಇವರು ZURICH, SWITZERLAND ದಲ್ಲಿ ಆಯೋಜಿಸಿರುವ World Conference on Virology ಯಲ್ಲಿ ತಮ್ಮ ಸಂಶೋಧನಾ ಪತ್ರಿಕೆ "Molecular phylogeny of genus Nothopegia Blume nom.cons (Anacardiaceae) in Central Western Ghats Karnataka, based on the ITS, rbcl and trnLF markers" ಮಂಡಿಸಲು ಸ್ವಿಡ್ಜರ್‌ಲ್ಯಾಂಡ್ ದೇಶಕ್ಕೆ ಹೋಗಿ ಬರಲು ಅನುಮತಿಸಿದ ಸಭೆಯು ಪ್ರಬಂಧ ಮಂಡನೆಗೆ. ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆಯ ಅನುಸಾರ ಪರಿಶೀಲಿಸಿ, ಪ್ರಯಾಣ / ದಿನಭತ್ಯೆ ಶೇ.50ರಷ್ಟು ಹಾಗೂ ನೋಂದಣಿ ಶುಲ್ಕ ಶೇ.50ರಷ್ಟು ಅಥವಾ ಗರಿಷ್ಠ $ 200, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಲು ಮಂಜೂರಾತಿ ನೀಡಲು ನಿರ್ಣಯಿಸಿತು.

**2025–ಸಿಂ–5.22:** ಡಾ. ರಮೇಶ್ ಹೆಚ್.ಎನ್. ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ ಇವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮೋದನೆ ನೀಡುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ರಮೇಶ್.ಹೆಚ್.ಎನ್., ಇವರು ದಿನಾಂಕ: 03-09-2025 ರಿಂದ 04-09-2025ರವರೆಗೆ Srilankan and Indian University, Colombo, Srilanaka ಇವರು Ontario International Development Agency Canada ಇವರ ಸಹಭಾಗಿತ್ವದಲ್ಲಿ. ಶ್ರೀಲಂಕಾದಲ್ಲಿ ಆಯೋಜಿಸಿರುವ "22nd International Conference on Sustainable Development 2025" ರಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಲು ಶ್ರೀಲಂಕಾ ದೇಶಕ್ಕೆ ಹೋಗಿಬರಲು ಅನುಮತಿಸಿದ ಸಭೆಯು ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆಯ ಅನುಸಾರ ಪರಿಶೀಲಿಸಿ, ಪ್ರಯಾಣ/ ದಿನಭತ್ಯೆ ಶೇ.50ರಷ್ಟು ಹಾಗೂ ನೋಂದಣಿ ಶುಲ್ಕ ಶೇ.50ರಷ್ಟು ಅಥವಾ ಗರಿಷ್ಠ $ 200, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಲು ಮಂಜೂರಾತಿ ನೀಡಲು ನಿರ್ಣಯಿಸಿತು.

**ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

--

**ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ**

**2025–ಸಿಂ–5.23: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2025–ಸಿಂ–5.23(ಎ–1): ಶ್ರೀ ಕೆ.ಪಿ. ಶ್ರೀಪಾಲ್:** ಪದವಿ ವಿದ್ಯಾರ್ಥಿಗಳಿಗೆ ಕಾನೂನಿನ ಅರಿವು ಕುರಿತು ಬೋಧಿಸುವ ಬಗ್ಗೆ.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವಜನತೆ ಹೆಚ್ಚಿನ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದು, ತಮ್ಮ ಭವಿಷ್ಯ ಹಾಳುಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ, ಬೇರೆಯುವರು ರೂಪಿಸಿದ ಸಂಚಿಗೆ ಬಲಿಯಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ದಿನನಿತ್ಯದ ಜೀವನದಲ್ಲಿ ಅಗತ್ಯವಿರುವ ಕಾನೂನುಗಳ ಬಗ್ಗೆ ತಿಳುವಳಿಕೆ ನೀಡುವ ಅಗತ್ಯವಿದೆ ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ Legal Awareness ನ್ನು ಪದವಿ ವಿದ್ಯಾರ್ಥಿಗಳು ಇಂದಿನ ಕಾಲಮಾನದಲ್ಲಿ ಅಧ್ಯಯನ ಮಾಡಿ ತಿಳಿದುಕೊಳ್ಳುವುದು ತುಂಬಾ ಅಗತ್ಯ ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮುಂದುವರಿದು ಮಾತನಾಡಿ, ಇದನ್ನು Non credit programme ಆಗಿ ಇಡಬಹುದು ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

Scanned with OKEN Scanner

ಮಾನ್ಯ ಕುಲಪತಿಯವರು ಮಾತನಾಡಿ, ಇದು ಉತ್ತಮ ಸಲಹೆಯಾಗಿದ್ದು, ಇದರ ಬಗ್ಗೆ ಅಧ್ಯಯನ ಮಂಡಳಿಗಳ ಸಭೆಯಲ್ಲಿ ಚರ್ಚಿಸಿ ಅಳವಡಿಸಲು ಕ್ರಮವಹಿಸಲಾಗುವುದು ಎಂದರು.

2025–ಸಿಂ–5.23(ಎ–2): **ಶ್ರೀ ಕೆ.ಪಿ. ಶ್ರೀಪಾಲ್: ಡಾ ಅನುರಾಧ ಪಟೇಲ್‌ರವರ ನಿವೃತ್ತಿ ವೇತನದ ಬಗ್ಗೆ.**

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ. ಅನುರಾಧ ಪಟೇಲ್‌ರವರು ತೀವ್ರವಾದ ಆರೋಗ್ಯ ಸಮಸ್ಯೆಯಿಂದ ಈಗಾಗಲೇ ವಯೋನಿವೃತ್ತಿ ಪಡೆದಿದ್ದು, ಇದುವರೆಗೂ ನಿವೃತ್ತಿ ವೇತನ ಪಾವತಿಸಿಲ್ಲ. ಆದಷ್ಟು ಬೇಗನೆ ಪಾವತಿಗೆ ಕ್ರಮ ಕೈಗೊಳ್ಳಿ ಎಂದರು.

ಕುಲಸಚಿವರು ಮಾತನಾಡಿ, ಅವರು ದಿನಾಂಕ:31–01–2013 ರಿಂದ 30–06–2024 ರವರೆಗೆ ಶ್ರೀ ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿಗೆ ನಿರ್ದೇಶಕರಾಗಿ ನಿಯೋಜನೆ ಮೇರೆಗೆ ತೆರಳಿದ್ದು, ದಿನಾಂಕ:01–07–2024 ರಂದು ವಿಶ್ವವಿದ್ಯಾಲಯದ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು. ನಂತರ ಆರೋಗ್ಯದ ಸಮಸ್ಯೆಯ ಕಾರಣ ನೀಡಿ ವೈದ್ಯರ ಸಲಹೆಯಂತೆ ದಿನಾಂಕ:02–07–2024 ರಿಂದ 31–12–2024ರವರೆಗೆ ಮೂರು ತಿಂಗಳು ರಜೆ ಕೋರಿದ್ದರು. ದಿನಾಂಕ:31–12–2024ರ ನಂತರ ಯಾವುದೇ ಸಂದರ್ಭದಲ್ಲಿಯೂ ಕೂಡ ರಜೆಯನ್ನು ಮುಂದುವರೆಸಬಾರದೆಂಬ ಷರತ್ತಿನ ಮೇಲೆ ಮಾನ್ಯ ಕುಲಪತಿಗಳು 183 ದಿನಗಳ ರಜೆ ಮಂಜೂರು ಮಾಡಲು ಅನುಮತಿಸಿರುತ್ತಾರೆ. ಸದರಿಯವರು ರಜೆ ಮುಗಿದ ನಂತರ ದಿನಾಂಕ:01–01–2025ರಂದು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ, ದಿನಾಂಕ:01–01–2025 ರಿಂದ 31–03–2025 ರವರೆಗೆ ಪುನ: ವೈದ್ಯಕೀಯ ಕಾರಣಗಳ ಆಧಾರದ ಮೇರೆ ರಜೆಗೆ ಅರ್ಜಿ ಸಲ್ಲಿಸಿದ್ದರು. ಆದರೆ, 180 ದಿನಗಳ ಕಾಲ ಗರಿಷ್ಠ ಅವಧಿಗೆ ರಜೆ ಮಂಜೂರು ಮಾಡಿದ್ದು, ಅದನ್ನು ಮುಂದುವರಿಸಿ ಮಂಜೂರು ಮಾಡಲು ಅವಕಾಶವಿಲ್ಲವೆಂದೂ, ಕೂಡಲೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆಯೂ ಅವರಿಗೆ ಪತ್ರ ಬರೆಯಲಾಗಿತ್ತು. ಆದರೆ, ಅವರು ದಿನಾಂಕ:27–03–2025ರಂದು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಾಗ ದಿನಾಂಕ:01–01–2025 ರಿಂದ 31–03–2025ರವರೆಗೆ ಬೆನ್ನು ನೋವಿನ ಕಾರಣ ಪರಿವರ್ತಿತ ಮತ್ತು ಗಳಿಕೆ ರಜೆಯ ಮನವಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಅನುಮತಿ ಪಡೆದುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಈ ಅವಧಿಗೆ ಅವರ ರಜೆ ಮಂಜೂರಾಗಿಲ್ಲ. ಇದರ ಕುರಿತಾಗಿ ಕಾನೂನು ಸಲಹೆಗಾಗಿ ಪತ್ರ ಬರೆಯಲಾಗಿದೆ. ಕಾನೂನು ಸಲಹೆ ಬಂದ ನಂತರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

2025–ಸಿಂ–5.23(ಎ–3): **ಶ್ರೀ ಕೆ.ಪಿ. ಶ್ರೀಪಾಲ್: ಮಧ್ಯಂತರ ರಜಾ ಅವಧಿ ಹೆಚ್ಚಿಸುವ ಬಗ್ಗೆ**

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಸ್ನಾತಕ ಕಾಲೇಜುಗಳ ಮಧ್ಯಂತರ ರಜಾ ಅವಧಿಯನ್ನು ಹೆಚ್ಚಿಸುವಂತೆ ಕಾಲೇಜುಗಳ ಅಧ್ಯಾಪಕರು ಮನವಿ ಮಾಡಿದ್ದಾರೆ. ದಯವಿಟ್ಟು ಪರಿಶೀಲಿಸಿ ಎಂದರು. ಶ್ರೀ ಅರವಿಂದರವರು ಮಾತನಾಡಿ ಈ ಬಾರಿ ಕಾಲೇಜುಗಳ ಅಧ್ಯಾಪಕರಿಗೆ ಸಾಕಷ್ಟು ರಜೆ ದೊರೆತಿದೆ ಎಂದರು. ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ ಕೆಲವು ಕಾಲೇಜು ಅಧ್ಯಾಪಕರು ಸರಿಯಾಗಿ ತರಗತಿಗಳನ್ನು ತೆಗೆದುಕೊಳ್ಳುತ್ತಿಲ್ಲ. ಅವರು ಬೇರೆ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ ಎಂಬ ಬಹಳಷ್ಟು ದೂರುಗಳಿವೆ ಎಂದರು.

ಈ ಕುರಿತು ಪರಿಶೀಲಿಸುವುದಾಗಿ ಮಾನ್ಯ ಕುಲಪತಿಯವರು ತಿಳಿಸಿದರು.

2025–ಸಿಂ–5.23(ಎ–4): **ಶ್ರೀ ಕೆ.ಪಿ. ಶ್ರೀಪಾಲ್: ಅಧ್ಯಯನ ಕೇಂದ್ರಗಳಿಂದ ಬಾಕಿ ಶುಲ್ಕ ವಸೂಲಾತಿ ಬಗ್ಗೆ.**

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಶುಲ್ಕ ಬಾಕಿ ಉಳಿಸಿಕೊಂಡಿರುವ ಕೆಲವು ದೂರಶಿಕ್ಷಣ ಅಧ್ಯಯನ ಕೇಂದ್ರಗಳ ಮುಖ್ಯಸ್ಥರನ್ನು ಕರೆಸಿ ಮಾತುಕತೆ ನಡೆಸಬೇಕೆಂದು ಹಿಂದಿನ ಕೆಲವು ಸಿಂಡಿಕೇಟ್ ಸಭೆಗಳಲ್ಲಿ ಚರ್ಚಿಸಿ ನಿರ್ಣಯಿಸಲಾಗಿತ್ತು. ಆದರೆ, ಈವರೆಗೂ ಯಾವುದೇ ಕ್ರಮ ಆಗಿಲ್ಲ ಎಂದರು. ಶ್ರೀ ಹೆಚ್.ಜಿ. ಅರವಿಂದರವರು ಮಾತನಾಡಿ, ಒಂದು ವಿಶೇಷ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

Scanned with OKEN Scanner

ಸಿಂಡಿಕೇಟ್ ಸಭೆ ನಡೆಸಿ, ಅಧ್ಯಯನ ಕೇಂದ್ರದವರನ್ನು ಕರೆಸಿ ಹಣ ವಸೂಲಾತಿ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಬಾಕಿ ಇರುವ ರೂ.100 ಲಕ್ಷ (ರೂಪಾಯಿ ನೂರು ಲಕ್ಷ ಮಾತ್ರ) ಗಳಲ್ಲಿ ಈಗಾಗಲೇ ರೂ.30 ಲಕ್ಷ (ರೂಪಾಯಿ ಮೂವತ್ತು ಲಕ್ಷ ಮಾತ್ರ) ಗಳನ್ನು ಪಾವತಿಸಿದ್ದಾರೆ. ಇನ್ನೂ ರೂ.70 ಲಕ್ಷ (ರೂಪಾಯಿ ಎಪ್ಪತ್ತು ಲಕ್ಷ ಮಾತ್ರ) ಗಳು ಬಾಕಿ ಇದೆ ಎಂದರು.

ಚರ್ಚೆಯ ನಂತರ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ, ಶುಲ್ಕ ಬಾಕಿ ಉಳಿಸಿಕೊಂಡಿರುವ ಎಲ್ಲಾ ಅಧ್ಯಯನ ಕೇಂದ್ರದವರನ್ನು ಸಭೆಗೆ ಕರೆಸಿಕೊಂಡು, one Time Settlement ಎಂದು ಬಾಕಿ ಶುಲ್ಕ ವಸೂಲಾತಿಗೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

2025-ಸಿಂ-5.23(ಎ-5): **ಶ್ರೀ ಕೆ.ಪಿ. ಶ್ರೀಪಾಲ್: ಪಿಹೆಚ್.ಡಿ. ಸಂಶೋಧನಾರ್ಥಿಗಳ ಕುರಿತು.**

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಕೆಲವು ಮಾರ್ಗದರ್ಶಕರು ಪಿಹೆಚ್.ಡಿ. ಸಂಶೋಧಕರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದಾರೆ ಎಂಬ ದೂರುಗಳಿವೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಇದು ಖಂಡನೀಯವಾಗಿದ್ದು, ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದರು.

2025-ಸಿಂ-5.23(ಬಿ-1): **ಶ್ರೀ ಲಕ್ಷ್ಮಿಕಾಂತ ಚಿಮನೂರು: ನಿವೃತ್ತಿ ವೇತನ ಸೌಲಭ್ಯಗಳನ್ನು ತಡೆಹಿಡಿಯುವ ಬಗ್ಗೆ.**

ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಸಹ್ಯಾದ್ರಿ ಕಾಲೇಜಿನಲ್ಲಿ ಗ್ರಂಥಪಾಲರಾಗಿ ಕಾರ್ಯನಿರ್ವಹಿಸಿದ ಶ್ರೀ ಮಂಜುನಾಥ ಲೋಹಾರ್ ಮತ್ತು ದೈಹಿಕ ಶಿಕ್ಷಣ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಶ್ರೀ ಶಿವಮೂರ್ತಿ ಇವರುಗಳು ಇದೇ ಜುಲೈ 31 ರಂದು ವಯೋನಿವೃತ್ತಿ ಹೊಂದಿದ್ದು, ಇವರುಗಳ ಬಗ್ಗೆ ಹಲವು ದೂರುಗಳು ಬಂದಿದ್ದು, ಹಿಂದಿನ ಪ್ರಾಂಶುಪಾಲರು ಕೂಡ ದೂರು ನೀಡಿದ್ದಾರೆ. ಅವರುಗಳ ಪ್ರಕರಣಗಳು ನ್ಯಾಯಾಲಯದಲ್ಲಿದ್ದು, ಇನ್ನೂ ಅಂತಿಮ ತೀರ್ಪು ಬಂದಿಲ್ಲ. ನ್ಯಾಯಾಲಯದ ಆದೇಶ ಬರುವವರೆಗೆ ಮತ್ತು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದ ನಂತರ ಅವರುಗಳ ಗಳಿಕೆ ರಜೆ ನಗದೀಕರಣ ಮತ್ತು ನಿವೃತ್ತಿ ವೇತನ ಸೌಲಭ್ಯಗಳನ್ನು ನೀಡಿ ಎಂದರು.

ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

2025-ಸಿಂ-5.23(ಬಿ-2): **ಶ್ರೀ ಲಕ್ಷ್ಮಿಕಾಂತ ಚಿಮನೂರು:** ವಿಶ್ವವಿದ್ಯಾಲಯದ ಕಾರ್ಯಕ್ರಮಗಳಲ್ಲಿ ಸಿಂಡಿಕೇಟ್ ಸದಸ್ಯರು ಭಾಗವಹಿಸುವ ಬಗ್ಗೆ.

ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ನಡೆಯುವ ರಾಷ್ಟ್ರೀಯ ಹಬ್ಬಗಳು ಮತ್ತು ಇತರೆ ಕಾರ್ಯಕ್ರಮಗಳಲ್ಲಿ ಸಿಂಡಿಕೇಟ್ ಸದಸ್ಯರಿಗೆ ವೇದಿಕೆಯ ಮೇಲೆ ಆಸನ ಒದಗಿಸಬೇಕು ಎಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯ ಹಾಗೂ ಘಟಕ ಕಾಲೇಜುಗಳಲ್ಲಿ ವಿಚಾರ ಸಂಕಿರಣ, ಸಮ್ಮೇಳನ, ಕಾರ್ಯಾಗಾರ, ಸಂವಾದ ಮುಂತಾದ ಶೈಕ್ಷಣಿಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಇಂತಹ ಕಾರ್ಯಕ್ರಮಗಳಲ್ಲಿ ವಿಷಯ ತಜ್ಞರು ಭಾಗವಹಿಸುತ್ತಿದ್ದು, ಸಿಂಡಿಕೇಟ್ ಸದಸ್ಯರು ಆಹ್ವಾನಿತರಾಗಿ ವೇದಿಕೆಯ ಮುಂಭಾಗ ಕುಳಿತುಕೊಳ್ಳಬಹುದು. ಆದರೆ, ರಾಷ್ಟ್ರೀಯ ಹಬ್ಬಗಳು ಮತ್ತು ಗಣ್ಯರ ಜಯಂತಿ ಮುಂತಾದ ಕಾರ್ಯಕ್ರಮಗಳಲ್ಲಿ ಸಿಂಡಿಕೇಟ್ ಸದಸ್ಯರಿಗೆ ವೇದಿಕೆ ಒದಗಿಸಲಾಗುವುದು. ಇನ್ನು ಮುಂದೆ ಎಲ್ಲಾ ಕಾರ್ಯಕ್ರಮಗಳಿಗೂ ಸಿಂಡಿಕೇಟ್ ಸದಸ್ಯರಿಗೆ ಅಂಚೆ ಅಥವಾ ವಾಟ್ಸಾಪ್ ಮೂಲಕ ಆಹ್ವಾನ ನೀಡಲಾಗುವುದು ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

Scanned with OKEN Scanner

2025–ಸಿಂ–5.23(ಸಿ–1): ಶ್ರೀ ಶಾಂತಕುಮಾರ್ ಜಿ.ಎಸ್. – ವಿವಿಧ ಸಮಿತಿಗಳ ರಚನೆ ಕುರಿತು.

ಶ್ರೀ ಶಾಂತಕುಮಾರ್ ಜಿ.ಎಸ್. ರವರು ಮಾತನಾಡಿ ವಿಶ್ವವಿದ್ಯಾಲಯವು ರಚಿಸಿರುವ ವಿವಿಧ ಸಮಿತಿಗಳಲ್ಲಿ ಕೆಲವು ಸಿಂಡಿಕೇಟ್ ಸದಸ್ಯರುಗಳು ಮಾತ್ರ ಇದ್ದಾರೆ. ನನ್ನನ್ನು ಯಾವುದೇ ಸಮಿತಿಗೆ ನೇಮಕ ಮಾಡಿಲ್ಲ. ಮುಂದಿನ ಸಿಂಡಿಕೇಟ್ ಸಭೆಗೆ ಯಾವ್ಯಾವ ಸಿಂಡಿಕೇಟ್ ಸದಸ್ಯರು ಯಾವ ಯಾವ ಸಮಿತಿಗಳಲ್ಲಿ ಸದಸ್ಯರಾಗಿದ್ದಾರೆ ಎಂಬ ವಿವರ ನೀಡಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಎಲ್ಲಾ ಸದಸ್ಯರನ್ನು ವಿವಿಧ ಸಮಿತಿಗಳಿಗೆ ನೇಮಕ ಮಾಡಲಾಗಿದೆ. ಆದಾಗ್ಯೂ ಈ ಬಗ್ಗೆ ಪರಿಶೀಲಿಸಲಾಗುವುದು ಹಾಗೂ ಸಿಂಡಿಕೇಟ್ ಸದಸ್ಯರು ನೇಮಕವಾಗಿರುವ ಸಮಿತಿಗಳ ವಿವರಗಳನ್ನು ಅವರಿಗೆ ಒದಗಿಸಲಾಗುವುದು ಎಂದರು.

2025–ಸಿಂ–5.23(ಡಿ–1): ಡಾ.ಜಿ. ಮಧು – ಬಿ.ಇಡಿ. ಕಾಲೇಜುಗಳಿಗೆ ಸಂಯೋಜನಾ ಆದೇಶ ಕುರಿತು.

ಡಾ.ಜಿ. ಮಧುರವರು ಮಾತನಾಡಿ, ಈವರೆಗೂ ಬಿ.ಇಡಿ. ಕಾಲೇಜುಗಳಿಗೆ ಸಂಯೋಜನಾ ಆದೇಶವನ್ನೇ ನೀಡಿಲ್ಲ. ಇದರಿಂದ ತೊಂದರೆಯಾಗುತ್ತದೆ ಎಂದರು. ಸಭೆಗೆ ಆಹ್ವಾನಿತರಾಗಿದ್ದ ಸಿ.ಡಿ.ಸಿ. ನಿರ್ದೇಶಕರಾದ ಡಾ.ನಾಗರಾಜರವರು ಮಾತನಾಡಿ, ಈ ಹಿಂದೆ ಯು.ಯು.ಸಿ.ಎಂ.ಎಸ್. ನಲ್ಲಿ ತೊಂದರೆಯಾಗಿದ್ದ ಬಿ.ಇಡಿ. ಕಾಲೇಜುಗಳ ಹೆಸರು ಬದಲಾವಣೆ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಅನುಮೋದನೆ ದೊರೆತಿಲ್ಲ. ಸರ್ಕಾರ ಕಡ್ಡಾಯಗೊಳಿಸಿರುವ Fire Safety and Bulding Safety Certificateಗಳನ್ನು ಕಾಲೇಜಿನವರು ಸಲ್ಲಿಸಿಲ್ಲ ಎಂಬ ಕಾರಣ ನೀಡಿ ಕ್ಲಿಯರೆನ್ಸ್ ಕೊಡುತ್ತಿಲ್ಲ. ಕಾಲೇಜಿನಿಂದ ಅವುಗಳು ಬಂದ ಕೂಡಲೇ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದರು.

2025–ಸಿಂ–5.23(ಡಿ–2): ಡಾ.ಜಿ. ಮಧು – ಕೋರ್ಸ್ ಮ್ಯಾಪಿಂಗ್ ಹಾಗೂ ಪ್ರವೇಶಾನುಮೋದನೆ ಕುರಿತು.

ಡಾ.ಜಿ.ಮಧುರವರು ಮಾತನಾಡಿ, ಪರೀಕ್ಷೆಗಳು ಆರಂಭವಾದರೂ ವಿಶ್ವವಿದ್ಯಾಲಯದಲ್ಲಿ ಬಿ.ಇಡಿ. ಕೋರ್ಸ್ ಮ್ಯಾಪಿಂಗ್ ಆಗಿರುವುದಿಲ್ಲ ಮತ್ತು ಪ್ರವೇಶಾನುಮೋದನೆ ಆಗುತ್ತಿಲ್ಲ. ಇದರಿಂದಾಗಿ ಪರೀಕ್ಷೆ ಸಮೀಪಿಸುತ್ತಿದ್ದಂತೆ ತೊಂದರೆಗಳಾಗುತ್ತಿವೆ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಇದು ಶೈಕ್ಷಣಿಕ ವಿಭಾಗದ ಸಮಸ್ಯೆಯಾಗಿದೆ ಎಂದರು. ಕುಲಸಚಿವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಿದರು.

2025–ಸಿಂ–5.23(ಇ–1): ಶ್ರೀ ಶಿವಕುಮಾರ್ ಎಂ. – ಚಿಕ್ಕಮಗಳೂರಿನಲ್ಲಿ ಸಭೆ ಏರ್ಪಡಿಸುವ ಬಗ್ಗೆ.

ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಈ ಹಿಂದಿನ ಸಭೆಗಳಲ್ಲಿ ಸ್ನಾತಕೋತ್ತರ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಲು ಕಡೂರು ಹಾಗೂ ಚಿಕ್ಕಮಗಳೂರುಗಳಲ್ಲಿ ಸಿಂಡಿಕೇಟ್ ಸಭೆಯನ್ನು ನಡೆಸಬೇಕೇಂದು ನಿರ್ಣಯವಾಗಿದ್ದು ಕ್ರಮ ಆಗಿಲ್ಲ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ ಮುಂದಿನ ಸಿಂಡಿಕೇಟ್ ಸಭೆಯನ್ನು 10ನೇ ಅಕ್ಟೋಬರ್ 2025ರಂದು ಸಿಂಡಿಕೇಟ್ ಸದಸ್ಯರಾಗಿರುವ ಶ್ರೀ ಉಲ್ಲಾಸ್, ಇ.ಜಿ.ರವರ ಸಹ್ಯಾದ್ರಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್, ಚಿಕ್ಕಮಗಳೂರಿನಲ್ಲಿ ನಡೆಸಲಾಗುವುದು ಎಂದರು.

2025–ಸಿಂ–5.23(ಎಫ್–1): ಶ್ರೀ ಹೆಚ್.ಜಿ. ಅರವಿಂದ – ದ್ವಿಗುಣ ಅವಧಿ ಮುಗಿದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಬಗ್ಗೆ.

ಶ್ರೀ ಹೆಚ್.ಜಿ. ಅರವಿಂದರವರು ಮಾತನಾಡಿ, ಕೆಲವು ವಿದ್ಯಾರ್ಥಿಗಳು ಸ್ನಾತಕ ಪದವಿಯ ದ್ವಿಗುಣ ಅವದಿ ಮುಗಿದಿದ್ದಾಗ್ಯೂ ಉದ್ಯೋಗ, ಮದುವೆ, ಅನಾರೋಗ್ಯ ಮುಂತಾದ ಕಾರಣಗಳಿಂದ ಒಂದೆರಡು ವಿಷಯಗಳನ್ನು ಬಾಕಿ ಉಳಿಸಿಕೊಂಡಿದ್ದು, ಈಗ ಪದವಿ ಪೂರೈಸದೇ, ಉನ್ನತ ಶಿಕ್ಷಣ, ಬಡ್ತಿ ಮುಂತಾದವುಗಳಿಂದ ವಂಚಿತರಾಗಿದ್ದಾರೆ. ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆದು ಪದವಿ ಪೂರೈಸಿಕೊಳ್ಳಲು ಇನ್ನೊಂದು ಕೊನೆಯ ಅವಕಾಶ ನೀಡಿದರೆ ಅವರ ಭವಿಷ್ಯದ ದೃಷ್ಟಿಯಿಂದ ಅನುಕೂಲವಾಗುತ್ತದೆ ಎಂದರು. ಶ್ರೀ ಶಿವಕುಮಾರ್, ಶ್ರೀಮತಿ ಸಾಕಮ್ಮ,



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಶ್ರೀ ಮುಸಾವೀರ್ ಬಾಷಾ, ಶ್ರೀ ಶಶಿಧರ ಮತ್ತು ಶ್ರೀ ಶಾಂತಕುಮಾರ್‌ರವರು ಇದಕ್ಕೆ ಧ್ವನಿಗೂಡಿಸಿದರು. ಡಾ.ಕೆ. ಎಲ್. ಅರವಿಂದರವರು ಮಾತನಾಡಿ, ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆ ನೀಡುವುದಾದಲ್ಲಿ ಒಂದೇ ಪರೀಕ್ಷಾ ಕೇಂದ್ರವನ್ನು ನಿಗದಿಗೊಳಿಸಿದರೆ ಒಳ್ಳೆಯದು ಎಂದರು. ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ. ಶಿವಮೊಗ್ಗದಲ್ಲಿಯೇ ಪರೀಕ್ಷಾ ಕೇಂದ್ರ ಮಾಡಲಾಗುವುದು ಎಂದರು.

ಚರ್ಚೆಯ ನಂತರ 2015ರ ನಂತರದಲ್ಲಿ ದ್ವಿಗುಣ ಅವಧಿ ಮುಗಿದಿರುವ ಸ್ನಾತಕ ವಿದ್ಯಾರ್ಥಿಗಳಿಗೆ ವಿಶೇಷ ಶುಲ್ಕದೊಂದಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲು ನಿರ್ಣಯಿಸಿದ ಸಭೆಯು, ಸದರಿ ವಿದ್ಯಾರ್ಥಿಗಳಿಗೆ. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿಯೇ ಪರೀಕ್ಷೆ ಬರೆಯಬೇಕೆಂಬುದನ್ನು ಅನುಮೋದಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/-
ಕುಲಪತಿಗಳು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner